ಆಂತರಿಕ ಪ್ರಸಾರಕ್ಕಾಗಿ ಮಾತ್ರ

ECHOES
INDIA

ಶ್ರೀ ರಾಮಚಂದ್ರ ಮಿಷನ್®

ಜನವರಿ 2014 ಸಂಪುಟ 7 ಸಂಚಿಕೆ 1



# ನವ ವರ್ಷದ ಶುಭಾಶಯಗಳು!





## ಮಣಪಾಕ್ಕಂ, ಡಿಸೆಂಬರ್ 31, 2013 – ಜನವರಿ 1, 2014

ಕ್ರಿಸ್ಮಸ್ ನಂತರ ಗುರುಗಳಿಗೆ ಕೊಂಚ ಜ್ವರವಿದ್ದುದು ವೈದ್ಯರುಗಳನ್ನು ಚಿಂತೆಗೀಡುಮಾಡಿತ್ತು. ಆದರೆ ಅವರ ಆರೋಗ್ಯವು ಡಿ.30 ರ ಸಂಜೆಯ ತನಕ ಸುಧಾರಿಸಿತು. ನವ ವರ್ಷಾಚರಣೆಗಾಗಿ ಚೆನ್ನೈ ಮತ್ತಿತರ ಕೇಂದ್ರಗಳಿಂದ ಎಂಟು ಸಾವಿರದಷ್ಟು ಅಭ್ಯಾಸಿಗಳು ಒಟ್ಟುಗೂಡಿದ್ದರು. ತಾರಸಿಯ ಮೇಲೆ ಮತ್ತು ಆಟದ ಮೈದಾನಗಳಲ್ಲಿ ಅಭ್ಯಾಸಿಗಳ ವಸತಿಯ ವ್ಯವಸ್ಥೆ ಮಾಡಲಾಗಿತ್ತು. ಹೊಸ ವರ್ಷದ ಹಿಂದಿನ ಸಂಜೆ, ಧ್ಯಾನಮಂದಿರದಲ್ಲಿ ಮಕ್ಕಳು ನೀಡಿದ ನೃತ್ಯ ಪ್ರದರ್ಶನವನ್ನು ಗುರುಗಳು ಟಿವಿ ಸಂಪರ್ಕದ ಮೂಲಕ ವೀಕ್ಷಿಸಿದರು.

1ನೇ ತಾರೀಖಿನ ಮುಂಜಾನೆ ಧ್ಯಾನಮಂದಿರ ಹಾಗು ಮಾಳಿಗೆಗಳು ಕಿಕ್ಕಿರಿದು ತುಂಬಿದ್ದವು. ಗುರುಗಳು ಸತ್ಸಂಗ ನಡೆಸಿಕೊಡುವರೆಂದು ಯಾರೂ ನಿರೀಕ್ಷಿರಲಿಲ್ಲವಾದರೂ, ಧ್ಯಾನಮಂದಿರಕ್ಕೆ ಅವರು ಆಗಮಿಸಿ ಅಭ್ಯಾಸಿಗಳ ಆನಂದಾಶ್ಚರ್ಯಕ್ಕೆ ಕಾರಣರಾದರು. ಅವರು ಎಲ್ಲರಿಗೂ ನವವರ್ಷದ ಶುಭಾಶಯ ಕೋರುತ್ತ ಬಂದಾಗ ನಲಿವು ನೆಲೆಗೊಂಡಿತು. ನಿಜವಾದ ಅರ್ಥದಲ್ಲಿ, ಅದು ಗುರುಗಳು ನೀಡಿದ ಕಾಣಿಕೆಯಾಯಿತು. ಒಂದು ಗಂಟೆಯ ಸತ್ಸಂಗದ ನಂತರ, ಅಭ್ಯಾಸಿ ಗಾಯಕರಿಂದ ಮೂರು ಗೀತೆಗಳನ್ನು ಆಲಿಸಿದ ಗುರುಗಳು ತದನಂತರ ಅವರ ಎಂದಿನ ಸ್ಪಷ್ಟ, ಚೈತನ್ಯಭರಿತ ಮಾತಿನಲ್ಲಿ ಉಪನ್ಯಾಸ ನೀಡಿದರು.


ಅವರು, ಓರ್ವನು ಎಷ್ಟು ವರ್ಷಗಳ ಕಾಲ ಧ್ಯಾನ ಮಾಡುವನೆಂಬುದು ಮುಖ್ಯವಲ್ಲ, ಏಕೆಂದರೆ ಪುರಾತನ ಕಾಲದ ಮಹರ್ಷಿಗಳು ಸಾವಿರಾರು ವರ್ಷಗಳ ಕಾಲ ತಪಸ್ಸು ಮಾಡುತ್ತಿದ್ದರು ಆದರೆ ಬಾಬೂಜಿಯವರ ಪ್ರಕಾರ ಸಹಜಮಾರ್ಗದಲ್ಲಿ ಒಂದು ಜೀವನಕಾಲದಲ್ಲಿಯೇ ಗುರಿಸಾಧನೆ ಸಾಧ್ಯ ಎಂದರು.

"ಈಗಲಾದರೂ ಎಚ್ಚತ್ತುಕೊಳ್ಳಿ, ನಿಮ್ಮ ಹೃದಯದಿಂದ ದ್ವೇಷವನ್ನು, ಇತರರ ಪರವಾದ ತಿರಸ್ಕಾರ ಭಾವನೆಯನ್ನು, ಅಭಿಪ್ರಾಯ ರೂಪಿಸಿಕೊಳ್ಳುವುದನ್ನು ಕಿತ್ತು ಬಿಸಾಡಿ. ಸ್ನೋವೈಟ್‌ನ ರಾಣಿಯಂತೆ ಕನ್ನಡಿಯಲ್ಲಿ ನೀವೇನೆಂಬುದನ್ನು ನೋಡಿಕೊಳ್ಳಿ. ಅವಳಲ್ಲಿ ದ್ವೇಷ ಹೆಚ್ಚಾಗಿ ಸ್ನೋವೈಟನ್ನು ನಾಶ ಮಾಡಲು ಹವಣಿಸುತ್ತಾಳೆ. ಆದರೆ ನಾವು ಪ್ರಾಮಾಣಿಕವಾಗಿ, ನಾವು ನೋಡಿದ್ದನ್ನು ಅರ್ಥೈಸಿಕೊಳ್ಳುವ ಮನೋಭಾವದಿಂದ ನಮ್ಮನ್ನು ಕನ್ನಡಿಯಲ್ಲಿ ನೋಡಿಕೊಂಡಷ್ಟೂ ನಮ್ಮನ್ನು ಮೌಲ್ಯೀಕರಿಸಿ, ಸರಿಪಡಿಸಿಕೊಂಡು, ಪ್ರಗತಿಯ ಪಥದಲ್ಲಿ ಹಂತ ಹಂತವಾಗಿ ಮೇಲೇರಲು ಪ್ರೇರೇಪಣೆಯಾಗುತ್ತದೆ."

ಕೊನೆಯಲ್ಲಿ ಅವರೆಂದರು, "ನಿಮ್ಮೆಲ್ಲರಿಗಾಗಿ ಎರಡು ಸಂದೇಶಗಳಿವೆ. ಒಂದು, 'ಸಮಯ ವ್ಯರ್ಥ ಮಾಡಬೇಡಿ', ಮತ್ತೊಂದು 'ಅವರು ಪ್ರೀತಿಸುವ ಎಲ್ಲರನ್ನೂ ಪ್ರೀತಿಸಿ'."

ಆನಂತರ ಗುರುಗಳು ಹೊರಬಂದು ಬಿಸಿಲಿನಲ್ಲಿ ಕುಳಿತಿರುವಾಗ ಒಮ್ಮೆಗಾ ಶಾಲೆಯ 11 ಮತ್ತು 12ನೇ ವರ್ಗದ ಮಕ್ಕಳು ಅವರನ್ನು ಭೇಟಿಯಾದರು. ಗುರುಗಳು ಅವರೊಂದಿಗೆ ಮಾತನಾಡುತ್ತ, ಶುಭಾಶಯ ಕೋರುತ್ತ, ಬಹಳಷ್ಟು ಸಮಯ ಅವರೊಂದಿಗೆ ಕಳೆದರು.












## ಭಾರತದಲ್ಲಿ ವಲಯಗಳ ಪುನರ್‌ರಚನೆ

ಜನವರಿ 1, 2014ರಿಂದ ಜಾರಿಗೆ ಬರುವಂತೆ ಗುರುಗಳು ಭಾರತದಲ್ಲಿ ವಲಯಗಳನ್ನು ಪುನರ್‌ರಚಿಸಿದ್ದಾರೆ. ಭೂಪಟದಲ್ಲಿ ಹೊಸ ವಲಯಗಳು ತೋರ್ಪಡಿಸುತ್ತಿವೆ ಹಾಗು ಈ ಕೆಳಗೆ ವಲಯಗಳು ಮತ್ತು ಅವುಗಳ ವಲಯ ವ್ಯವಸ್ಥಾಪಕರ ವಿವರಗಳನ್ನು ನೀಡಲಾಗಿದೆ.

| ವಲಯ | ವಲಯದ ಹೆಸರು | ವಲಯ ವ್ಯವಸ್ಥಾಪಕರು | ಇ–ಮೇಲ್ ವಿಳಾಸ |
|---|---|---|---|
| 1 | ಹೈದರಾಬಾದ್ ಮೆಟ್ರೋ | ಶ್ರೀ ಉಲ್ಲಾಸ್ ರಾವ್ ಕುಂಬ್ಳೆ (ಹೈದರಾಬಾದ್) | zic.ap1@srcm.org |
| 1A | ಆಂ.ಪ. ಉತ್ತರ | ಶ್ರೀ ಮಧುಸೂದನರಾವ್ ಕೋತಪಲ್ಲಿ (ಹೈದರಾಬಾದ್) | zic.ap1a@srcm.org |
| 1B | ಆಂ.ಪ್ರ ಉತ್ತರ ಕರಾವಳಿ | ಶ್ರೀ ಆದಿನಾರಾಯಣ ಮೊಗಂತಿ (ವಿಶಾಖಪಟ್ಟಣಂ) | zic.ap1b@srcm.org |
| 1C | ಆಂ.ಪ್ರ ದಕ್ಷಿಣ ಕರಾವಳಿ | ಶ್ರೀ ಎಮ್ ಆರ್ ಗಂಗಾಧರ್ (ನೆಲ್ಲೂರು) | zic.ap1c@srcm.org |
| 1D | ಆಂ.ಪ್ರ ದಕ್ಷಿಣ | ಶ್ರೀ ಗಂಗಾಧರ ದೊಂಟಿರೆಡ್ಡಿ (ಹೈದರಾಬಾದ್) | zic.ap1d@srcm.org |
| 2 | ಚೆನ್ನೈ ಮೆಟ್ರೋ | ಕ್ಯಾ. ವಿನೀತ್ ಸಿಂಗ್ ರಾಣಾವತ್ (ಚೆನ್ನೈ) | zic.tn2@srcm.org |
| 2A | ತಮಿಳುನಾಡು ಉತ್ತರ | ಶ್ರೀ ಬಿ ಎಸ್ ಮುರುಗನ್ (ಹೊಸೂರು) | zic.tn2a@srcm.org |
| 2B | ತಮಿಳುನಾಡು ಪೂರ್ವ | ಶ್ರೀ ಟಿ ಎಸ್ ರಘುರಾಮ್ (ತಿರುಚನಾಪಳ್ಳಿ) | zic.tn2b@srcm.org |
| 2C | ತಮಿಳುನಾಡು ಪಶ್ಚಿಮ | ಶ್ರೀ ಟಿ ವಿ ವಿಶ್ವನಾಥ ರಾವ್ (ತಿರುಪ್ಪೂರು) | zic.tn2c@srcm.org |
| 2D | ತಮಿಳುನಾಡು ದಕ್ಷಿಣ | ಶ್ರೀ ರಾಮನಾಥನ್ ರಾಮಚಂದ್ರ (ಮಧುರೈ) | zic.tn2d@srcmorg |

continued..

# ಭಾರತದಲ್ಲಿ ವಲಯಗಳ ಪುನರ್‌ರಚನೆ (contd..)

| ವಲಯ | ವಲಯದ ಹೆಸರು | ವಲಯ ವ್ಯವಸ್ಥಾಪಕರು | ಇ–ಮೇಲ್ ವಿಳಾಸ |
|---|---|---|---|
| 3A | ಕೇರಳ ದಕ್ಷಿಣ | ಶ್ರೀ ಕೆ ಯು ಮೋಹನ್ (ತ್ರಿಶೂರು) | zic.kl3a@srcm.org |
| 3B | ಕೇರಳ ಉತ್ತರ | ಶ್ರೀ ಎ ಕೆ ಮೋಹನ್‌ದಾಸ್ (ಪಾಲಕ್ಕಾಡ್) | zic.kl3b@srcm.org |
| 4 | ಬೆಂಗಳೂರು ಮೆಟ್ರೋ | ಶ್ರೀ ಗಿರೀಶ್ ತೊಟ್ಲೂರ್ (ಬೆಂಗಳೂರು) | zic.ka4@srcm.org |
| 4A | ಕರ್ನಾಟಕ ಉತ್ತರ | ಶ್ರೀ ಗಜೇಂದ್ರ ಸಿಂಗ್ (ಗುಲ್ಬರ್ಗ) | zic.ka4a@srcm.org |
| 4B | ಕರ್ನಾಟಕ ದಕ್ಷಿಣ | ಶ್ರೀ ಮಧುಸೂದನ್ ಕೃಷ್ಣಸ್ವಾಮಿ (ಮೈಸೂರು) | zic.ka4b@srcm.org |
| 4C | ಕರ್ನಾಟಕ ಕರಾವಳಿ | ಶ್ರೀ ಸುಬ್ರಾಯ ಪೈ (ವಿಟ್ಲ) | zic.ka4c@srcm.org |
| 5 | ಮುಂಬೈ ಮೆಟ್ರೋ | ಶ್ರೀ ತುಷಾರ್ ಪ್ರಧಾನ್ (ಮುಂಬೈ) | zic.mh5@srcm.org |
| 5A | ಮಹಾರಾಷ್ಟ್ರ ಪಶ್ಚಿಮ | ಶ್ರೀ ಸುಭಾಷ್ ವೈದ್ಯ (ಪುಣೆ) | zic.mh5a@srcm.org |
| 5B | ಮಹಾರಾಷ್ಟ್ರ ಮಧ್ಯ | ಶ್ರೀ ಅರುಣ್‌ಕುಮಾರ್ ಚೌಹಾನ್ (ಔರಂಗಾಬಾದ್) | zic.mh5b@srcm.org |
| 5C | ಮಹಾರಾಷ್ಟ್ರ ವಿದರ್ಭ | ಶ್ರೀ ರಾಜೇಂದ್ರ ರೇತಿನಂ (ಪುಲ್‌ಗಾಂವ್) | zic.mh5c@srcm.org |
| 6A | ಗುಜರಾತ್ ಉತ್ತರ | ಶ್ರೀ ರಾಜೇಶ್ ಅಗರ್ವಾಲ್ (ಅಹಮದಾಬಾದ್) | zic.gj6a@srcm.org |
| 6B | ಗುಜರಾತ್ ದಕ್ಷಿಣ | ಡಾ. ಸುರೇಂದ್ರ ಆರ್ ಅಗರ್ವಾಲ್ (ಸೂರತ್) | zic.gj6b@srcm.org |
| 7A | ರಾಜಸ್ಥಾನ ಪಶ್ಚಿಮ | ಶ್ರೀ ವಿಕಾಸ್ ಮೋಘೆ (ಜೋಧ್‌ಪುರ್) | zic.rj7a@srcm.org |
| 7B | ರಾಜಸ್ಥಾನ ಉತ್ತರ | ಶ್ರೀ ಮಧುಕರ್ ಕೊಚಾರ್ (ಜೈಪುರ) | zic.rj7b@srcm.org |
| 8A | ಮಧ್ಯಪ್ರದೇಶ ಪಶ್ಚಿಮ | ಶ್ರೀ ನವೀನ್ ಮಿಶ್ರಾ (ಉಜ್ಜಯಿನಿ) | zic.mp8a@srcm.org |
| 8B | ಮಧ್ಯಪ್ರದೇಶ ಪೂರ್ವ | ಮೇ.ಜ. (ನಿ) ಆನಂದ್ ನಾರಾಯಣ್ ಮುದ್ರೆ (ಜಬಲ್ಪುರ) | zic.mp8b@srcm.org |
| 9 | ನವದೆಹಲಿ ಮೆಟ್ರೋ | ಶ್ರೀ ಸುಧೀರ್ ಮಾರ್‌ವಾಹ (ನವದೆಹಲಿ) | zic.dl9@srcm.org |
| 10 | ಪಂಜಾಬ್ | ಮೇ.ಜ. (ನಿ) ಹರ್‌ಭಜನ್ ಸಿಂಗ್ (ಚಂಡೀಗಢ) | zic.pb10@srcm.org |
| 11 | ಜಮ್ಮು ಮತ್ತು ಕಾಶ್ಮೀರ | ಶ್ರೀ ಸುರೇಂದರ್ ಶರ್ಮಾ (ಜಮ್ಮು) | zic.hpjk11@srcm.org |
| 11 | ಹಿಮಾಚಲ ಪ್ರದೇಶ | ಶ್ರೀ ಸುರೇಂದರ್ ಶರ್ಮಾ (ಜಮ್ಮು) | zic.hpjk11@srcm.org |
| 12A | ಉ.ಪ್ರ ಪಶ್ಚಿಮ | ಶ್ರೀ ಅಶೋಕ್ ಕುಮಾರ್ ಗರ್ಗ್ (ಮೀರಠ್) | zic.up12a@srcm.org |
| 12B | ಉ.ಪ್ರ ಷಹಜಹಾನ್‌ಪುರ | ಶ್ರೀ ಪ್ರಭಾತ್ ಕುಮಾರ್ ಸಿನ್ಹಾ (ಬಾಂಕೆ ಗಂಜ್) | zic.up12b@srcm.org |
| 12C | ಉ.ಪ್ರ ಲಖನೌ | ಶ್ರೀ ಆಶೀಶ್ ಕುಮಾರ್ ಸಿಂಗ್ (ಕಾನ್ಪುರ) | zic.up12c@srcm.org |
| 12D | ಉ.ಪ್ರ ಅಲಹಾಬಾದ್ | ಶ್ರೀ ಆಶೀಶ್ ಕುಮಾರ್ ಸಿಂಗ್ (ಕಾನ್ಪುರ) | zic.up12d@srcm.org |
| 12E | ಉ.ಪ್ರ ಪೂರ್ವ | ಶ್ರೀ ಅವಧೇಶ್ ಸಿಂಗ್ (ಗೋರಖ್‌ಪುರ್) | zic.up12e@srcm.org |
| 13 | ಪಶ್ಚಿಮ ಬಂಗಾಳ – ಕೊಲ್ಕಾತಾ | ಶ್ರೀ ಅಜಯ್ ಕುಮಾರ್ ಭಟ್ಟರ್ (ಕೊಲ್ಕಾತಾ) | zic.wb13@srcm.org |
| 14 | ಒಡಿಶಾ | ಶ್ರೀ ಗಂಗಾಧರ್ ಬೆಹೆರಾ (ಭುವನೇಶ್ವರ್) | zic.or14@srcm.org |
| 15 | ಅರುಣಾಚಲ ಪ್ರದೇಶ, ಅಸ್ಸಾಂ ಪೂರ್ವ, ನಾಗಾಲ್ಯಾಂಡ್ | ಶ್ರೀ ಈಶ್ವರ್ ಪ್ರಸಾದ್ (ತೀನ್‌ಸುಖಿಯಾ) | zic.arnl15@srcm.org |
| 16 | ಮೇಘಾಲಯ, ಪಶ್ಚಿಮ ಅಸ್ಸಾಂ, ತ್ರಿಪುರ, ಮಣಿಪುರ್, ಮಿಜೋರಾಂ | ಶ್ರೀ ಧನಿ ಚಂದ್ (ಗೌಹಾಟಿ) | zic.as16@srcm.org |
| 17 | ಬಿಹಾರ | ಶ್ರೀ ಮನೋಜ್ ತಿವಾರಿ (ರಾಂಚಿ/ಕೊಲ್ಕಾತಾ) | zic.brjh17@srcm.org |
| 18 | ಉತ್ತರಾಖಂಡ | ಶ್ರೀ ಭುಪೇಂದ್ರಸಿಂಗ್ ಶುಫಾಲ್ (ಅಲ್ಮೋರಾ) | zic.uk18@srcm.org |
| 19 | ಛತ್ತೀಸ್‌ಗಢ | ಶ್ರೀ ದೀಪಕ್ ತ್ಯಾಗಿ (ರಾಯ್‌ಪುರ್) | zic.ct19@srcm.org |
| 20 | ಝಾರ್ಖಂಡ್ | ಶ್ರೀ ಮನೋಜ್ ತಿವಾರಿ (ರಾಂಚಿ/ಕೊಲ್ಕಾತಾ) | zic.brjh17@srcm.org |
| 21 | ಹರಿಯಾಣ | ಶ್ರೀ ಸತ್ಯ ನಾರಾಯಣ್ ಮಂಡಲ್ (ನವ ದೆಹಲಿ) | zic.hr21@srcm.org |
| 22 | ಸಿಕ್ಕಿಂ, ಪ.ಬಂಗಾಳ–ಉತ್ತರ | ಶ್ರೀ ರವೀಂದ್ರ ತೆಲಂಗ್ (ಗ್ಯಾಂಗ್‌ಟೋಕ್) | zic.si22@srcm.org |




## ಅಕ್ಟೋಬರ್ 2013

ಚೀನೀ ವಿಚಾರಗೋಷ್ಠಿ ಮುಕ್ತಾಯಗೊಂಡ ಬಳಿಕ, ಗುರುಗಳ ಆರೋಗ್ಯ ಕೆಟ್ಟುಹೋಗಿದ್ದು ಅವರಿಗೆ ಜನರನ್ನು ಭೇಟಿಯಾಗುವುದು ಕಷ್ಟವೆನಿಸುತ್ತಿತ್ತು. ಅವರ ಕಾಲುಗಳ ಸಮಸ್ಯೆ ಮುಂದುವರಿದಿದ್ದು, ಅಲ್ಲಿ ಸುಧಾರಣೆಯ ಚಿಹ್ನೆಯಿರಲಿಲ್ಲ. ಅವರ ಎರಡೂ ಹಿಮ್ಮಡಿಗಳಲ್ಲಿ ಇನ್ನೂ ನೋವು ಇದ್ದು ಅವರು ನಡೆಯುವುದನ್ನು ಸಂಪೂರ್ಣ ನಿಲ್ಲಿಸಿದ್ದಾರೆ. ವಾಸಿಯಾಗಲು ಸುಲಭವಾಗಲೆಂದು ಕಾಲುಗಳನ್ನು ಮೇಲೆಯೆ ಇಟ್ಟುಕೊಂಡಿರಲು ವೈದ್ಯರುಗಳು ಅವರನ್ನು ಕೇಳಿಕೊಂಡಿದ್ದಾರೆ.

ಅಕ್ಟೋಬರ್ 12ರಂದು ಬೆಳಗಿನ ಉಪಾಹಾರ ಮತ್ತು ತಿರುವಳ್ಳೂರ್ ಭೂ ಯೋಜನೆಯ ಕುರಿತಾದ ಸುದೀರ್ಘ ಚರ್ಚೆಯ ನಂತರ, ಗುರುಗಳು ಗಾಲ್ಫ್ ಗಾಡಿಯಲ್ಲಿ ಸುಮಾರು 45 ನಿಮಿಷಗಳ ಕಾಲ ಆಶ್ರಮದ ಸುತ್ತ ತಿರುಗಾಡಿದರು. ಅವರಿಗೆ ನಾಲ್ಕು ಮಂದಿ ನೆರವೀಯುತ್ತಿದ್ದರೂ ಗಾಲ್ಫ್ ಗಾಡಿಯನ್ನು ಹತ್ತುವುದು ಅವರಿಗೆ ತೀರಾ ಪ್ರಯಾಸಕರವೆನಿಸಿತು.

ಗುರುಗಳು ಸಾಯಂಕಾಲಗಳಲ್ಲಿ, ಸೂರ್ಯನ ಬಿಸಿಲಲ್ಲಿ ಕುಳಿತಿರಲು ಉತ್ತಮವಾದ ಜಾಗವಾದ್ದರಿಂದ ತನ್ನ ಮಲಗುವ ಕೋಣೆಯ ಹೊರಗಡೆ, ಕುಟೀರದ ಹಿಂಭಾಗದಲಿ ್ಲ ಕುಳಿತುಕೊಳ್ಳುತ್ತಾರೆ.

ಅಕ್ಟೋಬರ್ 13ರ ರವಿವಾರ ಗುರುಗಳ ಆರೋಗ್ಯ ಚೆನ್ನಾಗಿರಲಿಲ್ಲವಾಗಿ ಸೋ. ಕಮಲೇಶ್‌ರವರು ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಕೆಲವು ವಿವಾಹಗಳನ್ನೂ ನೆರವೇರಿಸಿದರು. ಅದು ದಸರಾ ವಾರಾಂತ್ಯವಾದ್ದರಿಂದ ಆಶ್ರಮದಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅಭ್ಯಾಸಿಗಳಿದ್ದರು. ಗೀತಾ ಪ್ರಶ್ನೋತ್ತರ ಅವಧಿಯು ಕುಟೀರದ ನಡುಮನೆಯಲ್ಲಿ ನಡೆದಿತ್ತು, ಸೋ. ಚಕ್ರಪಾಣಿಯವರು ನಿಯಂತ್ರಕರಾಗಿದ್ದು ಸೋ. ಸಂಸ್ಕೃತ ಕಣ್ಣನ್‌ರವರು ಪ್ರಶ್ನೆಗಳಿಗೆ ಉತ್ತರಿಸಿದರು. ಹೆಚ್ಚಿನ ಪ್ರಶ್ನೆಗಳು ಗೀತೆ ಮತ್ತು ಸಹಜಮಾರ್ಗ ಸಾಧನಾಪದ್ಧತಿಗಳ ನಡುವಿನ ಸಾಮ್ಯತೆಗಳನ್ನು ಗುರುತಿಸುವ ಪ್ರಯತ್ನದತ್ತ ಗಮನವನ್ನು ಕೇಂದ್ರೀಕರಿಸಿದ್ದವು. ತನ್ನ ಕೋಣೆಯಲ್ಲಿ ಚರ್ಚೆಯನ್ನು ಕೇಳುತ್ತಿದ್ದ ಗುರುಗಳು ಚರ್ಚೆಗಳಲ್ಲೊಂದರ ಮಧ್ಯೆ ಧ್ವನಿವರ್ಧಕವನ್ನು ಎತ್ತಿಕೊಂಡು ತನ್ನ ಅಭಿಪ್ರಾಯಗಳನ್ನು ಕೊಡತೊಡಗಿದರು. ಅವರ ಧ್ವನಿಯನ್ನು ಕೇಳಿ ಪ್ರತಿಯೊಬ್ಬರೂ ಆನಂದಾಶ್ಚರ್ಯತುಂದಿಲರಾದರು. "ಗುರಿಯನ್ನು ಸೇರಲು, ನನಗೆ ಗೊತ್ತಿರುವ ನಿಶ್ಚಿತವಾದ, ಏಕೈಕ ಹಾಗೂ ನಾನು ಅನುಸರಿಸಿದ ದಾರಿಯೆಂದರೆ ಸೇವೆ ಮಾಡುವುದು." ಎಂದು ಗುರುಗಳು ಹೇಳಿದರು.

ಗೀತಾಪ್ರವಚನದ ಅವಧಿಯ ಬಳಿಕ ಅಭ್ಯಾಸಿಗಳ ಗುಂಪು ಕರಗಿದ ನಂತರ, ಗುರುಗಳು ಕುಟೀರದ ನಡುಮನೆಗೆ ಬಂದು ಆ ಬೆಳಿಗ್ಗೆ ವಿವಾಹಿತರಾದ ದಂಪತಿಗಳು ಮತ್ತು ಅಲ್ಲಿ ಉಪಸ್ಥಿತರಿದ್ದ ಕೆಲ ಅಭ್ಯಾಸಿಗಳನ್ನು ಭೇಟಿಯಾದರು.

ಅಕ್ಟೋಬರ್ 16ರಂದು ಗುರುಗಳು ಮುಂಬರಲಿರುವ ಪ್ರಶಿಕ್ಷಕ ವಿಚಾರಗೋಷ್ಠಿಯ ಬಗ್ಗೆ ಸುದೀರ್ಘವಾದ ಚರ್ಚೆಯಲ್ಲಿ ತೊಡಗಿದ್ದರು. ಅವರು ಬರೀ 'ಪ್ರಶಿಕ್ಷಕನ ಕೆಲಸ'ದ ಬಗ್ಗೆ ಮಾತ್ರವಲ್ಲ, 'ಪ್ರಶಿಕ್ಷಕನ ಜೀವನ'ದ ಬಗ್ಗೆ ಮಾತನಾಡುತ್ತಿದ್ದರು.

### ಚೀನೀ ಪಾಠಗಳು

ಒಂದು ಮುಂಜಾನೆ ಉಪಾಹಾರದ ನಂತರ, ಗುರುಗಳು ತೀರ ಬಳಲಿದ್ದು ಹಾಸಿಗೆಯಲ್ಲಿ ಮಲಗಿಕೊಂಡಿದ್ದರೂ ಅವರಿಗೆ ನಿದ್ರಿಸಲಾಗಲಿಲ್ಲ. ಇಬ್ಬರು ಸೋದರಿಯರು ಅವರಿಗೆ ಚೀನೀ ಭಾಷಾಪಾಠಗಳನ್ನು ನಡೆಸಿಕೊಟ್ಟರು. ಗುರುಗಳು ಉಲ್ಲಸಿತರಾಗುವುದನ್ನು ಅದರ ಬಗ್ಗೆ ತ್ಸಾಹಭರಿತರಾಗುತ್ತಿದುದನ್ನು ಕಾಣಬಹುದಾಗಿತ್ತು. ಗುರುಗಳು ಆನಂತರ ಕಛೇರಿಗೆ ಬಂದರು. ಭಾಷೆಗಳಲ್ಲಿ ಅವರು ಅಷ್ಟೊಂದು ಆಸಕ್ತಿಯನ್ನು ಬೆಳೆಸಿಕೊಂಡುದು ಹೇಗೆ ಎಂದು ಕೇಳಲಾಗಿ, ಗುರುಗಳೆಂದರು, "ನೋಡಿ, ನಾನು ಜನರನ್ನು ಪ್ರೀತಿಸುತ್ತೇನೆ. ಹಾಗಾಗಿ ನಾನು ಅವರ ಬಗ್ಗೆ, ಅವರ ಸಂಸ್ಕೃತಿಯ ಬಗ್ಗೆ ಕಲಿಯಲು ಇಷ್ಟಪಡುತ್ತೇನೆ ಮತ್ತು ಅವರೊಡನೆ ಸಂಭಾಷಿಸಲು ಪ್ರಯತ್ನಿಸುತ್ತೇನೆ. ಆ ಕಾರಣ ನಾನು ಭಾಷೆಯನ್ನು ಕಲಿಯಬೇಕಾಗುತ್ತದೆ."

ಒಂದು ಸಂಜೆ ಕುಟೀರದ ಮುಂಭಾಗದಲ್ಲಿ ಅಭ್ಯಾಸಿಗಳ ದೊಡ್ಡ ಗುಂಪೊಂದು ಸೇರಿತ್ತು. ಆದರೆ ಹೊತ್ತುಮೀರುತ್ತಿತ್ತು, ಗುರುಗಳು ವಿಶ್ರಾಂತಿಯಲ್ಲಿದ್ದರು. ಅವರು ಹೊರಬರುವ ಸಾಧ್ಯತೆಗಳು ಕಡಿಮೆಯಿದ್ದುವು. ಇದ್ದಕ್ಕಿದ್ದಂತೆ, 7 ಗಂಟೆಗೆ ಗುರುಗಳು ಹೊರಬಂದರು ಮತ್ತು ಎಲ್ಲರನ್ನೂ ಭೇಟಿಯಾದರು. ಅವರು ಹಿಂದಿಯಲ್ಲಿ ಮಾತನಾಡಿ, "ನೀವೆಲ್ಲರೂ ದೂರದಿಂದ ಇಲ್ಲಿ ಆಶ್ರಮದಲ್ಲಿರಲು ಬಂದುದಕ್ಕೆ ನನಗೆ ತುಂಬ ಸಂತೋಷ. ಅನೇಕ ಅಭ್ಯಾಸಿಗಳು ಕೆಲಸಮಾಡಲು ಮಣಪಾಕ್ಕಂಗೆ ಬರಲಿಚ್ಛಿಸುತ್ತಾರೆ. ಅಭ್ಯಾಸಿಗಳು ಮೊದಲು ತಮ್ಮದೇ ಆಶ್ರಮಗಳಲ್ಲಿ ಕೆಲಸಮಾಡಿ ತಮ್ಮ ಆಶ್ರಮಗಳನ್ನು ಚೊಕ್ಕಟ ಮತ್ತು ಅಚ್ಚುಕಟ್ಟಾಗಿ ಇಟ್ಟುಕೊಳ್ಳಲು ನಾನು ಶಿಫಾರಸು ಮಾಡುತ್ತೇನೆ. ಅದು ನಿಮ್ಮ ಮನೆ. ದಯವಿಟ್ಟು ಅದನ್ನು ನಿರ್ಮಲವಾಗಿಡಿ. ಆಂತರಿಕ ಮತ್ತು ಬಾಹ್ಯ ನೈರ್ಮಲ್ಯ, ಎರಡೂ ಸಮಾನವಾಗಿ ಮುಖ್ಯ" ಎಂದರು. ಪ್ರೇಮದ ಬಗ್ಗೆ ಮಾತನಾಡುತ್ತ ಗುರುಗಳು ಒಂದು ಉದಾಹರಣೆ ಕೊಟ್ಟರು. "ಶ್ರೀಕೃಷ್ಣನು ದ್ವಾರಕೆಯನ್ನು ಬಿಟ್ಟು ಹೊರಡುವ ದಿನ, ರಾಧೆಯು ಆತನಲ್ಲಿ ತನಗಾಗಿ ಮಾತ್ರವೇ ಕೊಳಲು ನುಡಿಸಲು ಹೇಳುತ್ತಾಳೆ ಮತ್ತು ಆಗ ಕೃಷ್ಣ ಹೇಳುತ್ತಾನೆ, ನಾನು ಯಾವಾಗಲೂ ನಿನಗಾಗಿ ಮಾತ್ರವೇ ಕೊಳಲು ನುಡಿಸುತ್ತೇನೆ, ಆದರೆ ಉಳಿದ ಪ್ರತಿಯೊಬ್ಬರೂ ಅದನ್ನು ಆಲಿಸುತ್ತಾರೆ."

### ಅಕ್ಟೋಬರ್ 20ರ ರವಿವಾರ

ಗೀತಾಪ್ರವಚನದ ನಂತರ ಗುರುಗಳು ಫ್ರಾನ್ಸ್‌ನ ನೈಸ್‌ನಲ್ಲಿನ ಅಭ್ಯಾಸಿಗಳೊಂದಿಗೆ ವೀಡಿಯೊ ಸಂಪರ್ಕದ ಮುಖಾಂತರ ಸಂಭಾಷಣೆ ನಡೆಸಿದರು. ಸೋ. ಪಾಲ್ ಜೂಲ್‌ರವರು ವಿಚಾರಸಂಕಿರಣದ ಬಗ್ಗೆ ಮಾತನಾಡಿ ಅದು ಎಷ್ಟು ಪರಿಣಾಮಕಾರಿಯಾಗಿತ್ತು ಎಂಬುದನ್ನು ಹೇಳಿದರು. ಗುರುಗಳು, "ಈ ವಿಚಾರಸಂಕಿರಣಗಳು ನಿಮ್ಮನ್ನು ಸ್ವಲ್ಪ ಸ್ವಲ್ಪವೇ ಹೇಗೆ ಮುಂದಕ್ಕೆ ಕೊಂಡೊಯ್ಯುತ್ತಿವೆ ಎಂಬುದನ್ನು ನಾನು ನೋಡುತ್ತೇನೆ" ಎಂದರು. ನಂತರ ಅವರೆಂದರು, "ಈಗ ನೀವೆಲ್ಲರೂ ಉಳಿದವರಿಗೆ ಅದನ್ನೇ ಮಾಡಲು ಸಹಾಯಮಾಡಬೇಕು. ನಾನು ಯಾವಾಗಲೂ ಹೇಳುತ್ತ ಬಂದಿರುವ ಹಾಗೆ, ನಾವು ನಮ್ಮ ಸಲುವಾಗಿ ಮಾತ್ರವೇ ಬೆಳೆಯುವುದಿಲ್ಲ. ಅದು ಬೆಳವಣಿಗೆಯ ಸರಪಣಿಯಂತೆ." ಅವರು ಈ ರೀತಿಯ ಬೆಳವಣಿಗೆಯನ್ನು ಒಂದು 'ವಿಶ್ವವೃಕ್ಷ'ಕ್ಕೆ ಅನ್ವಯಿಸಿದರು. ಅಂಥದ್ದೊಂದು 'ವಿಶ್ವವೃಕ್ಷ'ದಲ್ಲಿ ಅಸಂಖ್ಯಾತ



ಎಲೆಗಳು, ಅಸಂಖ್ಯಾತ ಶಾಖೋಪಶಾಖೆಗಳು ಇರುತ್ತವೆ. ಆದರೂ ಅವೆಲ್ಲ ಒಂದಾಗಿರುತ್ತವೆ. ಅವು ಬೇರೆಬೇರೆಯಲ್ಲ. ಅವೆಲ್ಲ ಆ ವೃಕ್ಷದ ಭಾಗಗಳು. "ಆದ್ದರಿಂದ, ನಾವು ಏನಾಗಿ ಮಾಡಲ್ಪಟ್ಟಿರುವೆವೋ ಅದನ್ನು ಮಾತ್ರವೇ ಮಾಡುತ್ತಿದ್ದೇವೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು". ಅಮೇಲೆ ಅವರು ಇದನ್ನು ಒಂದು 'ಸ್ಪರ್ಶಮಣಿ'ಗೆ ಹೋಲಿಸುತ್ತಾ, "ನನ್ನ ಗುರುಗಳು, ಒಂದು ಸ್ಪರ್ಶಮಣಿ ಇತರವಸ್ತುಗಳನ್ನು ಬಂಗಾರವಾಗಿ ಮಾಡುತ್ತದೆ ಅಷ್ಟೇ. ನನಗೆ ಇನ್ನೊಂದನ್ನು ಸ್ಪರ್ಶಮಣಿಯನ್ನಾಗಿ ಮಾಡುವಂಥ ಸ್ಪರ್ಶಮಣಿ ಬೇಕು ಎಂದಿದ್ದಾರೆ. ಈ ಅರ್ಥದಲ್ಲಿ ನನ್ನ ಗುರುದೇವ, 'ನಾನು ಶಿಷ್ಯರುಗಳನ್ನು ತಯಾರಿಸುವುದಿಲ್ಲ, ನಾನು ಗುರುಗಳನ್ನು ತಯಾರಿಸುತ್ತೇನೆ' ಎಂದಿದ್ದಾರೆ. ಪ್ರತಿಯೊಬ್ಬರೂ ಗುರುವಾಗಲಾರರು. ಆದರೆ ಪ್ರತಿಯೊಬ್ಬರೂ ಗುರುವಿನಂತಾಗಬಹುದು" ಎಂದರು. ಕೊನೆಯಲ್ಲಿ ಗುರುಗಳು, ನಿಮ್ಮೆಲ್ಲರೊಂದಿಗಿರಲು ನನಗೆ ಒಂದು ರೀತಿಯಲ್ಲಿ ಸಂತೋಷವಿದೆ. ಆದರೆ ನಾನು ಅತ್ಯಂತ ಸಂತೋಷವಾಗಿಲ್ಲ ಏಕೆಂದರೆ ಇನ್ನೊಂದು ರೀತಿಯಲ್ಲಿ ನಾನು ನಿಮ್ಮೆಲ್ಲರೊಂದಿಗೆ ಇರಲಾಗಿಲ್ಲ. ನಂತರ ಗುರುಗಳು ಹೇಳಿದರು, ನಾನು ಅಲ್ಲಿದ್ದೇನೆ. ನನ್ನನ್ನು ನಂಬಿ, ನನ್ನ ಹೃದಯದಲ್ಲಿ ನಾನು ನಿಮ್ಮೆಲ್ಲರೊಂದಿಗಿದ್ದೇನೆ."

ತಮ್ಮ ಆರೋಗ್ಯದ ಬಗ್ಗೆ ಮಾತನಾಡುತ್ತ ಗುರುಗಳು ತಮಗೆ ಆರೋಗ್ಯ ಚೆನ್ನಾಗಿಲ್ಲದಿದ್ದು ಎದ್ದಾಗ ತಡವಾಗಿದ್ದರೂ, ತಾವು ಸಿದ್ಧರಾಗಲು, ಉಪಾಹಾರ ಮಾಡಿ, ಗಾಲಿ ಕುರ್ಚಿಯಲ್ಲಿ ಕುಳಿತು ತಿರುಗಾಡಲು, ತಮ್ಮನ್ನು ತಾವು ಸುಧಾರಿಸಿಕೊಂಡೆನೆಂದರು. ಗುರುಗಳು ಹೇಳಿದರು, "ಹಾಗಾಗಿ ಈಗ ನೀವು ನನ್ನನ್ನು ನೀವು ಮೊದಲು ನೋಡಿರುವಷ್ಟೇ ಉಲ್ಲಸಿತನಾಗಿರುವುದನ್ನು ನೋಡುತ್ತೀರಿ. ಆದ್ದರಿಂದ ನಾನು ಅದನ್ನು ಮಾಡಬಲ್ಲೆನಾದರೆ, ನೀವೂ ಅದನ್ನು ಮಾಡಬಲ್ಲಿರಿ. ಇನ್ನು ಮುಂದೆ ಅಸ್ವಸ್ಥತೆಯಿಲ್ಲ, ಇನ್ನು ಮುಂದೆ ಬಳಲಿಕೆಯ ಬಗ್ಗೆ ದೂರುಗಳಿಲ್ಲ. ನೀವು ಆಯಾಸಗೊಂಡಾಗ, ಎದ್ದೇಳಿ. ನೀವು ಖಿನ್ನರಾದಾಗ, ನಿಮ್ಮ ಖಿನ್ನತೆಯಿಂದ ಹೊರಬನ್ನಿ. ನೀವು ಅದರಲ್ಲಿ ಉಳಿದುಕೊಂಡರೆ ಅದು ಅಪಾಯಕಾರಿ. ಜಡ ಜಗತ್ತಿನ ಮೇಲೆ ಪ್ರಭುತ್ವ ಸಾಧಿಸಿ.!"

## ಚೆನ್ನೈಯಲ್ಲಿ ಮಳೆ

ಅಕ್ಟೋಬರ್ 21ರಿಂದ 23ರವರೆಗೆ ಧಾರಾಕಾರವಾಗಿಯೇ ಮಳೆಸುರಿಯುತ್ತಿದ್ದು ಗುರುಗಳಿಗೆ ಸ್ವಲ್ಪ ಉಸಿರಾಟದ ತೊಂದರೆ ಕಂಡುಬಂದಿತ್ತು. ಬೆಳಗಿನ ಉಪಾಹಾರದ ನಂತರ, ಅವರು ಕಳೆಗುಂದಿದ್ದು ಆಮ್ಲಜನಕಕಾರಕದ ಸಹಾಯವನ್ನು ಪಡೆಯಬೇಕಾಗಿತ್ತು. ಮೂರು ಸಭೆಗಳು ಒಂದರ ಹಿಂದೊಂದರಂತೆ ಕಾಯುತ್ತಿದ್ದು, ಗುರುಗಳು ತಾನು ಅವರೆಲ್ಲರನ್ನು ಒಟ್ಟಿಗೆ ಭೇಟಿಯಾಗುವೆನೆಂದು ಸೂಚಿಸಿದರು ಆದರೆ ಅವರು ಬೇರೆಬೇರೆ ಸಮಯಗಳಲ್ಲಿ ಬಂದರು. ಫ್ರೆಂಚ್ ಅಭ್ಯಾಸಿಗಳು ಬಂದು, ಫ್ರಾನ್ಸಿನಲ್ಲಿನ ಮೂರು ಆಶ್ರಮಗಳ ಮತ್ತು ಮಣಪಾಕ್ಕಂ ನಡುವಿನ ಒಂದು ಚತುಷ್ಪಥ ವಿಡಿಯೊ ಸಮ್ಮೇಳನದ ಮತ್ತು ಅದರಲ್ಲಿ ಗುರುಗಳು ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡುವ ಒಂದು ಪ್ರಸ್ತಾಪದ ಬಗ್ಗೆ ಚರ್ಚಿಸಿದರು.

ಆನಂತರ, ಗುರುಗಳು ಹೊರಬಂದು ತರಬೇತಿ ಪಡೆಯುತ್ತಿರುವ ಸೌಲಭ್ಯಕಾರರನ್ನು (facilitators) ಉದ್ದೇಶಿಸಿ ಮಾತನಾಡಿದರು. ಅವರು, ಕೃತಕ ವಿನಮ್ರತೆಯನ್ನು ದೂರವಿರಿಸಬೇಕು ಮತ್ತು ವಿನಮ್ರತೆ, ಔದಾರ್ಯ ಮತ್ತು ಸರಳತೆಯಂಥ ಗುಣಗಳು ಓರ್ವ ಅಭ್ಯಾಸಿಯ ಸಹಜ ಅಂಶವಾಗಿರಬೇಕು ಮತ್ತು ಓರ್ವನು ಸಹಜಮಾರ್ಗ ಸಾಧನೆಯ ಎಲ್ಲ ಅಂಶಗಳಿಗೂ ತನ್ನ ಗಮನವನ್ನು ಕೇಂದ್ರೀಕರಿಸಬೇಕೆಂದು ಒತ್ತಿಹೇಳಿದರು. ಭಾಷಣದ ನಂತರ ಅವರು ಒಂದು ಬೈಠಕ್ ಕೊಡಲು ನಿರ್ಧರಿಸಿದಾಗ ಪ್ರಶಿಕ್ಷಕ ಅಭ್ಯರ್ಥಿಗಳೆಲ್ಲರೂ ಒಳಬಂದು ಅವರು ಕೂಡಾ ಗುರುಗಳ ಸಮ್ಮುಖದಲ್ಲಿ ಕುಳಿತರು. ಸುಮಾರು 35 ನಿಮಿಷಗಳ ಬೈಠಕ್‌ನ ನಂತರ ಗುರುಗಳು ಬಹುತೇಕ ಉಸಿರುಗಟ್ಟಿದಂತಿದ್ದರು.

## ಪ್ರಶಿಕ್ಷಕ ತರಬೇತಿ ಕಾರ್ಯಾಗಾರ

ಪ್ರಶಿಕ್ಷಕ ಅಭ್ಯರ್ಥಿಗಳ ತಂಡವೊಂದು ಎರಡು ಸಪ್ತಾಹಗಳ 'ಪ್ರಶಿಕ್ಷಕ ತರಬೇತಿ ಕಾರ್ಯಾಗಾರ'ಕ್ಕಾಗಿ ಆಗಮಿಸಿತ್ತು. ಇದೊಂದು ಹೊಸ ಪದ್ಧತಿಯಾಗಿದ್ದು ವಿವಿಧ ಕೇಂದ್ರಗಳಿಂದ ಶಿಫಾರಸು ಮಾಡಲಾದ ಪ್ರಶಿಕ್ಷಕ ಅಭ್ಯರ್ಥಿಗಳು ಬಂದು ಕಾರ್ಯಾಗಾರದಲ್ಲಿ ಭಾಗವಹಿಸುತ್ತಾರೆ ಮತ್ತು ಅದರ ಕೊನೆಯಲ್ಲಿ ಅವರನ್ನು ಪ್ರಶಿಕ್ಷಕರನ್ನಾಗಿ ಮಾಡಲಾಗುತ್ತದೆ. ಎರಡನೆ ವಾರದಲ್ಲಿ, ಈ ಇಪ್ಪತ್ತೆರಡು ಅಭ್ಯರ್ಥಿಗಳು ಗುರುಗಳನ್ನು ಭೇಟಿಯಾಗಲು ಶಕ್ತರಾದರು. ಗುರುಗಳು, ಸಹಜಮಾರ್ಗ ತತ್ತ್ವಗಳನ್ನು ಅನುಸರಿಸುವುದು ಪ್ರಶಿಕ್ಷಕರಿಗೆ ಕೇವಲ ಒಂದು ಬದ್ಧತೆ ಮಾತ್ರವಲ್ಲ, ಅದು ಒಂದು ಕರಾರು ಆಗಿದೆ ಮತ್ತು ಪ್ರಶಿಕ್ಷಕರು ಮೊತ್ತಮೊದಲಾಗಿ ಅಭ್ಯಾಸಿಗಳಾಗಿರುತ್ತಾರೆ ಎಂಬುದನ್ನು ಒತ್ತಿಹೇಳಿದರು. ನಿಜವಾಗಿ ಕ್ರಮಬದ್ಧವಾದ ಅಭ್ಯಾಸವನ್ನು ಎಷ್ಟು ಮಂದಿ ಮಾಡುತ್ತಿರುವರೆಂದು ಗುರುಗಳು ಕೇಳಿದರು. ಅನಂತರ ಅವರಿಗೆ ಒಂದು ಗಂಟೆಯ ಬೈಠಕ್ ಕೊಟ್ಟರು.

## ಅಭ್ಯಾಸಿಗಳೊಂದಿಗೆ

ಗುರುಗಳು ಈ ದಿನಗಳಲ್ಲಿ ಹೆಚ್ಚಾಗಿ ತನ್ನ ಮಲಗುವಕೋಣೆಯ ಹಿಂಬದಿಯಲ್ಲಿ ಸೂರ್ಯನಬಿಸಿಲಿನಲ್ಲಿ ಕುಳಿತು ಬೆಳಗಿನ ಉಪಾಹಾರವನ್ನು ತೆಗೆದುಕೊಳ್ಳುತ್ತಾರೆ. ಒಂದು ಬೆಳಿಗ್ಗೆ, ಅವರು ಮಾತನಾಡುವ ಲಹರಿಯಲ್ಲಿದ್ದರು ಮತ್ತು, "GSTಯು








ಕಾರ್ಯನಿರತವಾಗಿದ್ದಾಗ ಮಿಷನ್‌ನಲ್ಲಿ ನಡೆಯುತ್ತಿದ್ದ ಪ್ರತಿಯೊಂದರಿಂದಲೂ ನನ್ನನ್ನು ದೂರವಿರಿಸಿರುವಂತೆ ಅನಿಸುತ್ತಿತ್ತು. ಏನು ನಡೆಯುತ್ತಿದೆ ಎಂದು ನನಗೆ ಗೊತ್ತಾಗುತ್ತಿದ್ದಿಲ್ಲ. ಅಂಥ ವಿಷಯಗಳಿಂದ ನಾನು ತೊಂದರೆಗೊಳಗಾಗಬಾರದು ಎಂಬುದೇ ಅದರ ಉದ್ದೇಶವಾಗಿತ್ತು. ಆದರೆ ನಾನು ತೊಂದರೆಗೊಳಗಾಗಲು ಬಯಸುತ್ತೇನೆ" ಎಂದರು. ತಾನು ನಿಯತವಾಗಿ ಅಭ್ಯಾಸಿಗಳನ್ನು ಭೇಟಿಯಾಗಲು ಇಷ್ಟಪಡುವೆನೆಂದೂ ಗುರುಗಳು ನುಡಿದರು. "ನನ್ನನ್ನು ಬರೀ ವೈದ್ಯರುಗಳಿಂದ ಸುತ್ತುವರಿಯಲ್ಪಟ್ಟ ಈ ಮಲಗುವಕೋಣೆಯಲ್ಲಿ ದಿನವಿಡೀ ಕೂಡಿಹಾಕಿರುವಾಗ ನನಗೆ ತೀರಾ ಒಬ್ಬಂಟಿಯೆನಿಸುತ್ತದೆ."

ಸಾಯಂಕಾಲ ಸತ್ಸಂಗದ ನಂತರ, ಗುರುಗಳು ವಿದೇಶೀಯ ಅಭ್ಯಾಸಿಗಳನ್ನೆಲ್ಲರನ್ನು ಕರೆದು ಕುಟೀರದ ಹೊರಗೆ ಅವರನ್ನು ಭೇಟಿಯಾದರು. ಸುಮಾರು 30 ನಿಮಿಷಗಳ ಕಾಲ ಸಾಮಾನ್ಯ ಸಂಭಾಷಣೆಯಲ್ಲಿ ಕಳೆಯಿತು. ಒಮ್ಮೆಲೇ, ಗುರುಗಳು ಸಂಪೂರ್ಣ ಮೌನ ತಾಳಿದರು. ಅದೊಂದು ಸಂಪೂರ್ಣ ಸ್ತಬ್ಧತೆ ಮತ್ತು ಮೌನದ ಅವಧಿಯಾಗಿತ್ತು ಅಭ್ಯಾಸಿಗಳೂ ಮೌನವಾಗಿದ್ದು ಪ್ರಕೃತಿಯೂ ಸಹಕರಿಸಿದಂತೆ ಕಾಣುತ್ತಿದ್ದು ಅಲ್ಲಿ ಸುಮಾರು 15–20 ನಿಮಿಷಗಳ ಕಾಲ ಪೂರ್ಣ ಮೌನವಿತ್ತು. ನಂತರ ಗುರುಗಳು ಫ್ರಾನ್ಸ್‌ನಲ್ಲಿ ಮಿಷನ್‌ನ ಬಗ್ಗೆ ಮಾತನಾಡಲಾರಂಭಿಸಿದರು.

## ನವೆಂಬರ್ 2013

### ಕಾರ್ಯಕಾರಿ ಸಮಿತಿಯ ಸಭೆ

ದೀಪಾವಳಿಯ ಮುನ್ನಾದಿನ ಗುರುಗಳ ಕುಟೀರದಲ್ಲಿ ಕಾರ್ಯಕಾರಿಸಮಿತಿಯ ಸಭೆ ನಡೆದಿತ್ತು. ಸಭೆಯ ಮೊದಲು, ಅವರಲ್ಲಿ ಕೆಲವರು ಗುರುಗಳನ್ನು ಅವರ ಕಛೇರಿಯಲ್ಲಿ ಭೇಟಿಯಾದರು. ಸೋ. ಜಾಕಿಯವರು ಗುರುಗಳನ್ನು, ಸೀತೆ ಕಾಡಿಗೆ ಹೋಗುವುದನ್ನು ದಿವ್ಯದೃಷ್ಟಿಯಿಂದ ಕಂಡಿದ್ದ ಋಷಿಯೊಬ್ಬನ ಕುರಿತಾಗಿ, ಆಕೆಯ ಭವಿಷ್ಯತ್ತನ್ನು ಬದಲಾಯಿಸಿ ದುರಂತವನ್ನು ತಪ್ಪಿಸಲು ಆತನಿಗೆ ಸಾಧ್ಯವಿದ್ದಿರಲಿಲ್ಲವೆ ಎಂದು ಕೇಳಿದರು. ಗುರುಗಳು ಹೇಳಿದರು, "ಅದು ಶ್ರೀರಾಮನ ಯೋಜನೆ ಆಗಿರದೆ ಇದ್ದರೆ ಆ ಋಷಿಗೆ ಅದನ್ನು ಮಾಡಲಾಗುತ್ತಿರಲಿಲ್ಲ. ಎರಡನೆಯದಾಗಿ, ನಾವೆಲ್ಲರೂ ನಿರ್ದಿಷ್ಟ ಸಂಸ್ಕಾರಗಳೊಂದಿಗೆ ಅವತರಣವಾಗಿದ್ದು ಲೌಕಿಕ ಜೀವನದಲ್ಲಿ ಏನಾಗುತ್ತದೆ ಎಂಬುದನ್ನು ನಾವು ಬದಲಾಯಿಸಲಾರೆವು. ನಾವು ವಿಕಸನದ ಬಗ್ಗೆ ಮಾತನಾಡುವಾಗ, ಹೇಗೋ ತನ್ನಿಂತಾನೇ ಆಗುವ ಭೌತಿಕ ಬದಲಾವಣೆಯ ಬಗೆಗೆ ಆಗಿರದೆ ಹೆಚ್ಚಾಗಿ ಅದು ಆಧ್ಯಾತ್ಮಿಕ ವಿಕಸನದ ಬಗ್ಗೆಯೆ ಆಗಿರಬೇಕು" ಎಂದರು. ಗುರುಗಳು ಮುಂದುವರಿದು ಹೀಗೆಂದರು, "ರಾಮನನ್ನು ಆಂಶಿಕ ಅವತಾರವೆಂದು ಹೇಳಲಾಗಿದೆ ಏಕೆಂದರೆ ಆತನಿಗೆ ತನ್ನ ದೈವತ್ವದ ಅರಿವಿರಲಿಲ್ಲ. ಭಗವಾನ್ ಕೃಷ್ಣನಿಗೆ ತನ್ನ ದೈವತ್ವದ ಅರಿವಿತ್ತು. ಆದ್ದರಿಂದ, ಅದು ಪ್ರಜ್ಞೆಯ ವಿಕಸನವಾಗಿದೆ ಮತ್ತು ನಮ್ಮ ಪ್ರಾರ್ಥನೆಯು ನಮ್ಮ ಪ್ರಜ್ಞೆಯ ಔನ್ನತ್ಯಕ್ಕಾಗಿ ಇರಬೇಕು".

ಸೋ. ಕಮಲೇಶ್‌ರವರು ಎರಡು ಗಂಟೆಗಳ ಕಾಲ ಕಾರ್ಯಕಾರಿ ಸಮಿತಿಯ ಸಭಾಕಾರ್ಯಕಲಾಪಗಳನ್ನು ನಡೆಸಿಕೊಟ್ಟರು. ಕೊನೆಯಲ್ಲಿ ಅವರು, ಪ್ರತಿವರ್ಷ ಸಮಿತಿಯ ಮೂರನೇ ಒಂದು ಭಾಗ ಸದಸ್ಯರು ನಿವೃತ್ತರಾಗಿ ಅವರ ಸ್ಥಾನಕ್ಕೆ ಹೊಸ ಸದಸ್ಯರು ಪರಿಚಯಿಸಲ್ಪಡುವರೆಂಬ ಗುರುಗಳ ಆದೇಶವನ್ನು ಓದಿ ಹೇಳಿದರು. ಆಗ ತಾನೇ ಗುರುಗಳು ತನ್ನ ಗಾಲಿಕುರ್ಚಿಯಲ್ಲಿ ಹೊರಬಂದು ಕೆಲ ನಿರ್ಣಾಯಕ ಟಿಪ್ಪಣಿಗಳನ್ನು ಕೊಟ್ಟರು. ಅನಂತರ ಅವರು ಊಟಕ್ಕೆಂದು ತೆರಳಿದರು.

### ದೀಪಾವಳಿ ಆಚರಣೆ: ನವೆಂಬರ್ 2–3, 2013

ಎರಡು ದಿನಗಳ ಅವಧಿಯಲ್ಲಿ ಸತ್ಸಂಗಕ್ಕೆ 5000ಕ್ಕಿಂತಲೂ ಹೆಚ್ಚಿನ ಭಾರೀ ಸಂಖ್ಯೆಯಲ್ಲಿ ಅಭ್ಯಾಸಿಗಳು ನೆರೆದಿದ್ದರು. ಸಂಘಟಕರು ಪೂರ್ವಭಾವಿ ವ್ಯವಸ್ಥೆಗಳಿಂದ ಈ ಸಮೂಹವನ್ನು ನಿಭಾಯಿಸಲು ಸಿದ್ಧರಾಗಿದ್ದರು. ಶನಿವಾರ, ಗುರುಗಳು ತನ್ನ ಕೋಣೆಯಲ್ಲಿ ಬೃಹತ್ ಸಂಖ್ಯೆಯ ಅಭ್ಯಾಸಿಗಳನ್ನು ಭೇಟಿಯಾದರು. ಅವರು ಅತ್ಯುತ್ಸಾಹದಲ್ಲಿದ್ದು ಪ್ರತಿಯೊಬ್ಬರನ್ನೂ ಅಭಿವಾದಿಸಿದರು. ಎರಡೂ ದಿನಗಳಂದು ಗುರುಗಳು ಸತ್ಸಂಗವನ್ನು ನಡೆಸಿಕೊಟ್ಟರು ಮತ್ತು ಸೋ. ಕಮಲೇಶ್‌ರವರು ಇತ್ತೀಚೆಗೆ ಪಡೆದ ವ್ಹಿಸ್ಪರ್ಸ್ ಸಂದೇಶಗಳನ್ನು ವಾಚಿಸಿದರು.

ನವೆಂಬರ್ 5ರಂದು ಗುರುಗಳು, ನಿರ್ಮಾಣಗೊಂಡ ಆಶ್ರಮವೊಂದನ್ನು ಮಿಷನ್‌ಗೆ ಕೊಡುಗೆಯಾಗಿ ನೀಡುವ ಬಗೆಗಿನ ಕಾಗದಪತ್ರಗಳನ್ನು ಒಪ್ಪಿಸಲು ವಡಕಾಂಗುಲಮ್(ತಮಿಳ್ನಾಡಿನ ದಕ್ಷಿಣ ಒಳನಾಡಿನಲ್ಲಿದೆ)ನಿಂದ ಬಂದ ಕೆಲ ಅಭ್ಯಾಸಿಗಳನ್ನು ಬರಮಾಡಿಕೊಂಡರು.

8ರಂದು ಗುರುಗಳು ಸೋ. ಕಮಲೇಶ್‌ರವರೊಂದಿಗೆ ನೀತಿಶಾಸ್ತ್ರ ಮತ್ತು ನೈತಿಕತೆಯ ವಿಷಯದಲ್ಲಿ ಚರ್ಚೆ ನಡೆಸಿದ್ದರು. ಅವರು ಮಿಷನ್‌ನ ವಿರುದ್ಧವಿರುವ ಅನೇಕ ವ್ಯಾಜ್ಯಗಳ ಬಗ್ಗೆ ಕಾಳಜಿ ವ್ಯಕ್ತಪಡಿಸಿ, ಇವನ್ನು ತನ್ನ ಉತ್ತರಾಧಿಕಾರಿಗೆ ಉಳಿಸಿಹೋಗುವುದು ತನಗೆ ಬೇಡವಾಗಿಲ್ಲವೆಂದರು.

## ಒಮೇಗಾ ಮಕ್ಕಳೊಂದಿಗೆ

ನವೆಂಬರ್ 9ರ ಶನಿವಾರ ಗುರುಗಳು, ಕಾಲ್ಚೆಂಡಾಟದ ಪಂದ್ಯವೊಂದರಲ್ಲಿ ವಿಜಯಿಗಳಾಗಿ, ಮುಂದಿನ ಸುತ್ತಿನ ಪಂದ್ಯಗಳಲ್ಲಿ ಭಾಗವಹಿಸಲು ರಾಷ್ಟ್ರೀಯ ಮಟ್ಟಕ್ಕೆ ಹೋಗುತ್ತಿರುವ ಒಮೇಗಾ ವಿದ್ಯಾರ್ಥಿಗಳನ್ನು ಭೇಟಿಯಾದರು. ಗುರುಗಳು ಅವರನ್ನೆಲ್ಲ ಅಭಿನಂದಿಸಿ ಶುಭ ಹಾರೈಸಿದರು. ಅವರು ಮಕ್ಕಳಲ್ಲಿ, “ನೀವೆಲ್ಲರೂ ಕ್ರೀಡೆಯನ್ನು ಕ್ರೀಡೆಗಾಗಿ ಮಾತ್ರವೇ ಆಡಬೇಕು. ಗೆಲ್ಲುವುದೊಂದೇ ನಿರ್ಣಾಯಕ ಅಂಶ ಅಲ್ಲ. ಇಬ್ಬರು ಆಡುವಾಗ, ಒಬ್ಬರು ಹೇಗಿದ್ದರೂ ಸೋಲಲೇ ಬೇಕು, ಆದರೆ ಕ್ರೀಡಾಸ್ಫೂರ್ತಿಯು ಅತ್ಯಂತ ಮುಖ್ಯವಾದ ಅಂಶವಾಗಿರಬೇಕು.” ಎಂದು ಹೇಳಿದರು.

## ಫ್ರೆಂಚ್ ವಿಚಾರಗೋಷ್ಠಿ

ನವೆಂಬರ್ 10ರ ರವಿವಾರ, ಗುರುಗಳು ನೈಸ್, ಮೋಂಟ್‌ಪೆಲರ್ ಮತ್ತು ಪ್ಯಾರಿಸ್‌ನ ಮೂರು ಆಶ್ರಮಗಳಲ್ಲಿದ್ದ ಅಭ್ಯಾಸಿಗಳನ್ನು ಏಕಕಾಲದಲ್ಲಿ ನೋಡುವಂತಾಯಿತು. ಅವರು ಪ್ರಭಾವಿತರಾಗಿ, ಭವಿಷ್ಯತ್ತಿನಲ್ಲಿ ಮುಂದೆ ತಾನು



ಇನ್ನೂ ಅನೇಕ ಆಶ್ರಮಗಳನ್ನು ನೋಡಿ, ಎಲ್ಲ ಅಭ್ಯಾಸಿಗಳನ್ನುದ್ದೇಶಿಸಿ ಏಕಕಾಲದಲ್ಲಿ ಮಾತನಾಡುವ ಒಂದು ದಿನ ಬಂದೀತೆಂದು ಆಶಿಸಿದರು. ಒಂದು ಪುಟ್ಟ ಭಾಷಣ ಮತ್ತು ಸತ್ಸಂಗದ ಬಳಿಕ ಆ ಅವಧಿಯು ಮುಕ್ತಾಯವಾಯಿತು. ಸಾಯಂಕಾಲ, ಸಭಾಂಗಣದಲ್ಲಿ ಕಾರ್ಯಕ್ರಮವು ಮುಂದುವರಿದು ಅಲ್ಲಿ ಸೋ. ಕಮಲೇಶ್‌ರವರು ಮೂರು ಫ್ರೆಂಚ್ ಆಶ್ರಮಗಳಲ್ಲಿನ ಅಭ್ಯಾಸಿಗಳನ್ನು ಉದ್ದೇಶಿಸಿ ಮಾತನಾಡಿದರು. ಅದೊಂದು ಪ್ರಶ್ನೋತ್ತರ ಕಾರ್ಯಕ್ರಮವಾಗಿದ್ದು, ಕ್ರೋಢೀಕರಿಸಿದ್ದ ಸುಮಾರು ಹತ್ತು ಪ್ರಶ್ನಾಸಂಚಯಗಳಿಗೆ ಸೋ. ಕಮಲೇಶ್‌ರವರು ಉತ್ತರಿಸಿದರು.

## ಸೋ. ಮಾಧವರವರ ಮನೆಯಲ್ಲಿ

ನವೆಂಬರ್ 11ರಿಂದ 18ರ ವರೆಗೆ ಗುರುಗಳು, ಆಶ್ರಮದ ಹಿಂದುಗಡೆಯೇ ಇರುವ ಸೋ. ಮಾಧವರವರ ಮನೆಯಲ್ಲಿ ಉಳಿದುಕೊಂಡರು. ಗುರುಗಳಿಗೆ ಇದೊಂದು ಬದಲಾವಣೆಯಾಗಿದ್ದು, ಅವರು ಸಂತೋಷವಾಗಿದ್ದರು. ದಿನಾಂಕ 11ರ ಸಂಜೆ ಗುರುಗಳಿಗಾಗಿ ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ರಶ್ಯನ್ ಫೆಡರೇಶನ್‌ನ ಕಾನ್ಸಲ್ ಜನರಲ್ ಆಗಿರುವ ಶ್ರೀ ನಿಕೊಲಾಯ್ ಅವರನ್ನೂ ಆಮಂತ್ರಿಸಲಾಗಿದ್ದು ಅವರನ್ನು ಸೂಕ್ತವಾಗಿ ಬರಮಾಡಿಕೊಳ್ಳುವಲ್ಲಿ ಗುರುಗಳು ವಿಶೇಷ ಲಕ್ಷ್ಯ ವಹಿಸಿದ್ದರು. ರಶ್ಯಾದ ಕಲಾವಿದರೊಬ್ಬರು ಗಂಟೆಗಳು ಮತ್ತು ಹಿತ್ತಾಳೆಯ ವಿವಿಧ ಗಾತ್ರದ ದೊಡ್ಡ ತಟ್ಟೆಗಳನ್ನು ಬಳಸಿ ಸಂಗೀತವನ್ನು ನುಡಿಸುವ ‘ರಶ್ಯಾದ ಹಾಡುವ ಗಂಟೆಗಳು’ ಎಂಬ ಕಾರ್ಯಕ್ರಮವನ್ನು ಪ್ರದರ್ಶಿಸಿದರು.

ಸೋ. ಮಾಧವರವರ ಮನೆಯಲ್ಲಿರುವಾಗ, ಗುರುಗಳು ಬೆಳಿಗ್ಗೆ ತನ್ನ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಿದ್ದರು ತದನಂತರ ಅಲ್ಲಿ ಉಪಸ್ಥಿತರಿರುವವರಿಗೆ ಒಂದು ಬೈಠಕ್ ಇರುತ್ತಿತ್ತು. ಸಾಯಂಕಾಲ ವಿಶ್ರಾಂತಿಯ ಬಳಿಕ ಗುರುಗಳು ಬೇರೆ ಕೇಂದ್ರಗಳಿಂದ ದೊಡ್ಡ ಸಂಖ್ಯೆಯಲ್ಲಿ ಬರುತ್ತಿರುವ ಅಭ್ಯಾಸಿಗಳಿಗೆ ಬೈಠಕ್ ಕೊಡುತಿದ್ದರು. ಅವರೊಂದಿಗೆ ಅಲ್ಪಾವಧಿಯ ಭೇಟಿಯ ಬಳಿಕ ತನ್ನ ಭೌತಚಿಕಿತ್ಸಕ(physiotherapist)ರ ಜೊತೆಗಿನ ಚಿಕಿತ್ಸಾವಧಿಗಾಗಿ ಮರಳಿ ತನ್ನ ಮಲಗುವಕೋಣೆಗೆ ತೆರಳಿದರು. ಗುರುಗಳಿಗೆ ಅತ್ಯವಶ್ಯ ವಿಶ್ರಾಂತಿ ದೊರಕಿತು ಮತ್ತು ಅದೇ ಸಮಯದಲ್ಲಿ



ಅವರು ಅಭ್ಯಾಸಿಗಳೊಂದಿಗೂ ಕಾಲ ಕಳೆದರು. ದಿನಾಂಕ 18ರಂದು ಅವರು ಆಶ್ರಮಕ್ಕೆ ಮರಳಿದರು.

## ಮರಳಿ ನಿಯತ ದಿನಚರಿಗೆ

ನವೆಂಬರ್ 30ರ ಶನಿವಾರ, 2013: ಪೂರ್ವಾಹ್ನ ಗುರುಗಳು ಕೆಲಸ ಮತ್ತು ಚರ್ಚೆಗಳಲ್ಲಿ ಸಂಪೂರ್ಣವಾಗಿ ಮಗ್ನರಾಗಿದ್ದರು. ಅಭ್ಯಾಸಿಗಳಿಗೆ ಏಕಕಾಲದಲ್ಲಿ ಅನೇಕ ಪುಸ್ತಕಗಳನ್ನು ಕೊಳ್ಳುವುದು ಒಂದು ಹೊರೆಯಾಗದಂತೆ ಒಂದು ಕಾಲಾವಧಿಯಲ್ಲಿ ಪುಸ್ತಕಗಳನ್ನು ಸಮನಾಗಿ ಹಂಚಿ ಬಿಡುಗಡೆ ಮಾಡುವ ಅಗತ್ಯವನ್ನು ಗುರುಗಳು ಒತ್ತಿಹೇಳಿದರು.

ನಂತರ ವಿಷಯವು ಮುಂಬರುವ ವರ್ಷದಲ್ಲಿನ ಉತ್ಸವಾಚರಣೆಗಳ ಕುರಿತಾದ ಚರ್ಚೆ ಮತ್ತು ಪೂಜ್ಯ ಲಾಲಾಜಿ ಹಾಗೂ ಪೂಜ್ಯ ಬಾಬೂಜಿಯವರ ಜನ್ಮದಿನೋತ್ಸವಗಳೆರಡನ್ನೂ ತಿರುಪ್ಪೂರದಲ್ಲಿ ಮತ್ತು ನಂತರ ಗುರುಗಳ ಜನ್ಮದಿನೋತ್ಸವವನ್ನು ತಿರುವಲ್ಲೂರಿನ ನವಾಗತ ಭೂಮಿಯಲ್ಲಿ ನಡೆಸುವ ನಿರ್ಧಾರದ ಕಡೆಗೆ ತಿರುಗಿತು.

## ಪ್ರವಾಸದ ಹಂಬಲ:

ಮತ್ತೆ ಪ್ರವಾಸಗಳನ್ನು ಕೈಗೊಳ್ಳಲು ಗುರುಗಳು ಸಹಜವಾಗಿ ಚಡಪಡಿಸುತ್ತಿದ್ದಾರೆ. ಸೋ. ಕಮಲೇಶ್ ಪಟೇಲ್ ಮತ್ತು ಇತರರನ್ನು ಭೇಟಿಯಾದ ವೇಳೆಗಳಲ್ಲಿ ಪ್ರವಾಸಗಳನ್ನು ಕೈಗೊಳ್ಳುವ ಅವರ ಈ ಕಾತರ ಎದ್ದು ಕಾಣಿಸುತ್ತಿತ್ತು. ಸೋ. ಕಮಲೇಶ್ ಪಟೇಲ್‌ರವರಿಗೆ ಗುರುಗಳು




ಹೇಳಿದರು ನಾನು ಸುಸ್ಥಿತಿಗೆ ಬಂದಮೇಲೆ ನೀವು ಮತ್ತು ನಾನು ವಡಕಾಂಗುಲಮ್‌ಗೆ ಹೋಗಲೇಬೇಕು. ಈಗ ಸುಸ್ಥಿತಿಯಲ್ಲಿದ್ದೇನೆ. ಆದರೆ ನಾನು ಅನಾರೋಗ್ಯಪೀಡಿತನಾಗುವ ಮುನ್ನ ಇದ್ದಂತೆ ಇನ್ನೊಬ್ಬರು ನನ್ನ ಕೈಹಿಡಿದುಕೊಂಡಾದರೂ ಊರುಗೋಲಿನೊಡನೆ ಕೆಲವು ಹೆಜ್ಜೆಗಳನ್ನು ಇಡುವ ಶಕ್ತಿಯನ್ನು ಪುನಃ ಪಡೆದುಕೊಳ್ಳಬೇಕು". ಅವರು ವಿವಿಧ ರೀತಿಯ ಪ್ರಯಾಣದ ವ್ಯವಸ್ಥೆಗಳನ್ನು ಪರಿಗಣಿಸಿ ಕೊನೆಗೆ ರಸ್ತೆ ಹಾದಿಯ ಪ್ರಯಾಣವನ್ನು ಆಯ್ಕೆ ಮಾಡಿಕೊಂಡು ಕ್ರಮಿಸಬೇಕಾದ ಮಾರ್ಗವನ್ನು ಗುರುತಿಸಿಕೊಂಡರು.

ಮತ್ತೊಂದು ಪ್ರಸಂಗದಲ್ಲಿ ಅವರು ಮಿನ್ಸ್ಕ್‌ಗೆ ಪ್ರಯಾಣಿಸುವ ಬಗ್ಗೆ ಮಾತನಾಡಿದರು. ಅವರೊಡನೆ ಹೊರಡಬೇಕಾದ ಜನರ ಹೆಸರುಗಳನ್ನು ಪಟ್ಟಿಮಾಡಿದರು. ಷಹಜಹಾನ್‌ಪುರಕ್ಕೆ ಭೇಟಿ ನೀಡುವ ಬಗ್ಗೆ ಸಹ ತಿಳಿಸಿದರು. ಆದರೆ ಜನಸಂದಣಿಯ ನಿರ್ವಹಣೆ ಕಷ್ಟವಾಗುವುದೆಂಬ ದೃಷ್ಟಿಯಿಂದ ಶ್ರುತಪಡಿಸದೆ ಅಲ್ಲಿಗೆ ಹೋಗುವ ಇಚ್ಛೆಯನ್ನು ವ್ಯಕ್ತಪಡಿಸಿದರು.

## ಕಾರ್ಯಮಾಡಲು ಅತ್ಯುತ್ಸಾಹ

ಇದೇ ಉತ್ಸಾಹ ಅವರಿಗೆ ರಾಶಿ ರಾಶಿ ಕೆಲಸಗಳನ್ನು ಎಡೆಬಿಡದೆ ತಮ್ಮ ಮೈಮೇಲೆ ಎಳೆದುಕೊಳ್ಳುವಂತೆ ಮಾಡುತ್ತವೆ. ಸಹಜ ಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನಕ್ಕೆ (ಎಸ್.ಎಂ.ಎಸ್.ಎಫ್) ಕಾರ್ಯಕರ್ತಕರನ್ನು ನೇಮಿಸದೆ ಸ್ವತಃ ಎಲ್ಲ ವ್ಯವಹಾರಗಳನ್ನು ನೀವೇ ಏಕೆ ಮಾಡುತ್ತೀರಿ ಎಂಬ ಪ್ರಶ್ನೆಗೆ ಅವರು ಹೇಳಿದರು "ಎಲ್ಲವನ್ನು ನಾನೇ ಮಾಡಬಲ್ಲೆ". ಮುಂದುವರಿಸಿ ಹೇಳಿದರು "ನಾನು ಕೆಲಸ ಮಾಡುತ್ತಿರುವುದರಿಂದಲೇ ಬದುಕಿದ್ದೇನೆ. ಇಲ್ಲದಿದ್ದರೆ 5 ವರ್ಷಗಳ ಹಿಂದೆಯೇ ನಾನು ಮೃತನಾಗುತ್ತಿದ್ದೆ".

## ಗುರುಗಳ ಇತ್ತೀಚಿನ ಯೋಜನೆ – ತಿರುವಳ್ಳೂರ್

ಗುರುಗಳು ಸೋ. ಪಿ.ಆರ್. ಕೃಷ್ಣರವರನ್ನು, ತಿರುವಳ್ಳೂರಿನ (113 ಎಕರೆ) ಆಸ್ತಿಯನ್ನು ನೋಡಿಕೊಳ್ಳಲು ಹಾಗು 2014ರ ಜುಲೈನಲ್ಲಿ ನಡೆಯುವ ಅವರ ಜನ್ಮದಿನೋತ್ಸವವನ್ನು ಆಯೋಜಿಸಲು ನೇಮಕ ಮಾಡಿದ್ದಾರೆ. ಸಹಜ ಮಾರ್ಗ ಆಧ್ಯಾತ್ಮಿಕ ಪ್ರತಿಷ್ಠಾನದ ಮೂಲಭೂತ ಸೌಕರ್ಯಗಳ ಪ್ರಗತಿಯನ್ನು ಹಾಗು ಜಲಸಮೃದ್ಧಿ ಇರುವ ಫಲವತ್ತಾದ ಪ್ರದೇಶದಲ್ಲಿ ಕೃಷಿಯನ್ನು ಮುಂದುವರೆಸುವ ಕೆಲಸಗಳ ಮೇಲ್ವಿಚಾರಣೆಯನ್ನು ಗುರುಗಳು ನೋಡಿಕೊಳ್ಳುತ್ತಿದ್ದಾರೆ.

*ಸಹಜ ಸಂದೇಶ ಸಂಖ್ಯೆ: 2013.54*

ಬುಧವಾರ, ಡಿಸೆಂಬರ್ 18, 2013.

ಪ್ರಿಯ ಸಹೋದರ ಸಹೋದರಿಯರೇ,

ಈ ವರ್ಷದಲ್ಲಿ (2014) ಮೂರು ಪ್ರಮುಖ ಸಮಾರಂಭಗಳನ್ನು ಆಯೋಜಿಸಲಾಗಿದೆ: ಫೆಬ್ರುವರಿ 2 ರಂದು ಲಾಲಾಜಿ ಮಹಾರಾಜರ ಜನ್ಮದಿನೋತ್ಸವ (4 ದಿನಗಳು – 1, 2, 3 ಮತ್ತು 4ನೇ ಫೆಬ್ರುವರಿ), ಬಾಬೂಜಿ ಮಹಾರಾಜರ ಜನ್ಮದಿನೋತ್ಸವ ಏಪ್ರಿಲ್ 29, 30 ಹಾಗು ಮೇ 1 ರಂದು. ಈ ಎರಡೂ ಕಾರ್ಯಕ್ರಮಗಳು ತಿರುಪ್ಪೂರಿನ ಡಿ.ಜೆ.ಪಾರ್ಕ್‌ನಲ್ಲಿ ನಡೆಯಲಿವೆ. ನಮ್ಮ ಈಗಿನ ಅಧ್ಯಕ್ಷರ ಜನ್ಮದಿನೋತ್ಸವವನ್ನು ಚೆನ್ನೈ ಬಳಿಯಿರುವ ತಿರುವಳ್ಳೂರಿನಲ್ಲಿ ಜುಲೈ 23, 24 ಮತ್ತು 25 ರಂದು ನಡೆಸಲಾಗುವುದು. ಕೊನೆಯಲ್ಲಿ ಹೇಳಿರುವ ಸಮಾರಂಭವು ತಿರುವಳ್ಳೂರಿನಲ್ಲಿ ಇತ್ತೀಚೆಗೆ ಕೊಂಡುಕೊಂಡ ಹಾಗು ಪರಿವರ್ತನಾ ಹಂತದಲ್ಲಿರುವ ಕೃಷಿ ಭೂಮಿಯಿರುವ ಸ್ಥಳದಲ್ಲಿ ನಡೆಯಲಿದೆ.

ಖರ್ಚು ವೆಚ್ಚಗಳು ವಿಪರೀತವಾಗಿರುವ ಇಂದಿನ ದಿನಗಳಲ್ಲಿ, ಅಭ್ಯಾಸಿಗಳು ಈ ಮೂರು ಸಮಾರಂಭಗಳಲ್ಲಿ ಒಂದನ್ನು ಆರಿಸಿಕೊಂಡು ಆದಷ್ಟು ಬೇಗ ನೋಂದಾಯಿಸಿಕೊಳ್ಳಲೆಂದು ನನ್ನ ಸಲಹೆ. ಏಕೆಂದರೆ ಪ್ರತಿಯೊಂದು ಸಮಾರಂಭಗಳಿಗೂ ಎಷ್ಟು ಮಂದಿ ಪಾಲ್ಗೊಳ್ಳಲಿದ್ದಾರೆಂಬುದನ್ನು ನಾವು ತಿಳಿಯಬಹುದಾಗಿದೆ.

ಇದು ಅಭ್ಯಾಸಿಗಳಿಗೆ ಕುಟುಂಬದ ಸದಸ್ಯರೊಡನೆ ಬರಲು ಅನುವು ಮಾಡಿಕೊಡುವುದು. ಅಭ್ಯಾಸಿಗಳಿಗೆ ಎಲ್ಲ ಸಮಾರಂಭಗಳಲ್ಲೂ ಭಾಗವಹಿಸುವ ಇಚ್ಛೆಯಿದ್ದಲ್ಲಿ ಅವರಿಗೆ ತಮ್ಮ ಕುಟುಂಬವನ್ನು ಜೊತೆಯಲ್ಲಿ ಕರೆತರಲು ಬಹಳ ಕಷ್ಟವೆನಿಸಬಹುದು. ಈ ನನ್ನ ವಿನಂತಿಯನ್ನು ಗಂಭೀರವಾಗಿ ಪರಿಗಣಿಸಿ ಇವುಗಳಲ್ಲಿ ಯಾವುದಾದರೂ ಒಂದು ಸಮಾರಂಭಕ್ಕೆ ಆದಷ್ಟು ಬೇಗ ನೋಂದಾಯಿಸಿರಿ.

ಈ ಯಾವುದೇ ಸಮಾರಂಭಗಳಲ್ಲಿ ಭಾಗವಹಿಸಲು ಸಾಧ್ಯವಾಗದ ಅಭ್ಯಾಸಿಗಳು ತಾವಿರುವ ಕೇಂದ್ರಗಳಲ್ಲಿ ಭಾಗವಹಿಸಬಹುದು. ಅಂತಹ ಪ್ರಸಂಗಗಳಲ್ಲಿ ಸಮಾರಂಭಗಳು ಕೇವಲ ಒಂದು ದಿನದ್ದಾಗಿರುತ್ತವೆ. ಉದಾ: ಫೆಬ್ರುವರಿ 2, ಏಪ್ರಿಲ್ 30 ಮತ್ತು ಜುಲೈ 24. ಅಭ್ಯಾಸಿಗಳು ಸಾಧ್ಯವಾದಲ್ಲಿ ತಮ್ಮ ಹತ್ತಿರದ ಕೇಂದ್ರಗಳಲ್ಲಿ ಭಾಗವಹಿಸುವಂತೆ ವಿನಂತಿಸಲಾಗಿದೆ. ಹಾಗಿಲ್ಲವಾದರೆ ಇಂದಿನ ಆರ್ಥಿಕ ಪರಿಸ್ಥಿತಿಯಲ್ಲಿ ನಿಮ್ಮ ಮನೆಯಲ್ಲಿಯೇ ಉಳಿಯುವುದು ಸಾಧುವೆನಿಸಬಹುದು.

ಎಲ್ಲರಿಗೂ ಆಶೀರ್ವಾದಗಳು,
ಪಿ. ರಾಜಗೋಪಾಲಾಚಾರಿ

## ಹೊಸ ನೇಮಕಾತಿಗಳು:

**ಸೋ. ಪೂರನ್‌ಮಲ್ ಬೈಂಧಾ,**
ಆಶ್ರಮ ವ್ಯವಸ್ಥಾಪಕರು, ಜೈಪುರ.

# ಪ್ರಶಿಕ್ಷಕರ ಸಭೆಗಳು

## ಹೊಸ ಪ್ರಶಿಕ್ಷಕರ ಕಾರ್ಯಾಗಾರ, ಮಣಪ್ಪಾಕ್ಕಂ



ಪ್ರಶಿಕ್ಷಕರು ನೀಡುವ ಸೇವೆಯ ಗುಣಮಟ್ಟವನ್ನು ಮತ್ತಷ್ಟು ವೃದ್ಧಿಪಡಿಸಲು ಗುರುಗಳು ಅವರ ಸಿದ್ಧತೆ ಮತ್ತು ತರಬೇತಿಗಾಗಿ ಒಂದು ಹೊಸ ವಿಧಾನವನ್ನು ಆರಂಭಿಸಿದ್ದಾರೆ. ಅಭ್ಯರ್ಥಿಗಳಿಗೆ ಆಳವಾದ ಜ್ಞಾನ, ಬದ್ಧತೆ ಮತ್ತು ಉದ್ದೇಶದ ಬಗ್ಗೆ ಸ್ಪಷ್ಟತೆಯನ್ನು ನೀಡಿ ಸಜ್ಜುಗೊಳಿಸಲು ಎರಡು ವಾರಗಳ ಪರ್ಯಂತ ಕಾರ್ಯಕ್ರಮ ನಡೆಸಲಾಗುತ್ತದೆ.

ತಲಾ ಇಪ್ಪತ್ತೆರಡು ಅಭ್ಯಾಸಿಗಳ ಎರಡು ತಂಡಗಳು ಅಕ್ಟೋಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ಈ ಶಿಕ್ಷಣವನ್ನು ಮಣಪ್ಪಾಕ್ಕಂನಲ್ಲಿ ಪೂರ್ಯೆಸಿ ಪ್ರಶಿಕ್ಷಕರಾಗಿ ಕಾರ್ಯನಿರ್ವಹಿಸಲು ಅನುಮತಿ ಪಡೆದುಕೊಂಡವು. ಅಭ್ಯರ್ಥಿಗಳು ದೇಶದ ವಿವಿಧ ಭಾಗಗಳಿಂದ ಬಂದಿದ್ದು, ಕೆಲವರು ಪ್ರಶಿಕ್ಷಕರೇ ಇಲ್ಲದ ಕೇಂದ್ರಗಳಿಂದ ಆಗಮಿಸಿದ್ದರು. ಗುರುಗಳು ಸ್ವತಃ ಅಭ್ಯರ್ಥಿಗಳೊಡನೆ ಸಲ್ಲಾಪ ನಡೆಸುತ್ತ, ಅವರಿಗೆ ಬೈಠಕಗಳನ್ನು ನೀಡುತ್ತ, ಅವರನ್ನು ಮುಂದಿನ ಪ್ರಶಿಕ್ಷಕ ಜೀವನಕ್ಕೆ ಸಜ್ಜುಗೊಳಿಸುವಲ್ಲಿ ನಿರತರಾಗಿದ್ದರು.

## ಲಕ್ನೋ, ಉತ್ತರ ಪ್ರದೇಶ

ಎಸ್.ಸಿ.ಆರ್, ಉತ್ತರಾಖಂಡ್, ಉತ್ತರ ಪ್ರದೇಶ (ಪಶ್ಚಿಮ) ಮತ್ತು ಉತ್ತರಪ್ರದೇಶ (ಕೇಂದ್ರ) ಪ್ರದೇಶಗಳಿಂದ ಆಗಮಿಸಿದ್ದ ನಾಲ್ಕು ವಲಯಗಳ 88 ಪ್ರಶಿಕ್ಷಕರು, ಬಾಬೂಜಿ ಸ್ಮಾರಕ ಭವನ, ಲಕ್ನೋದಲ್ಲಿ ನವಂಬರ್ 20 ರಿಂದ 24 ರವರೆಗೆ ಆಯೋಜಿಸಲಾಗಿದ್ದ "ಪ್ರಶಿಕ್ಷಕರ ಅನುಭವಗಳನ್ನು ಆಳವಾಗಿಸುವ" ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಕೇವಲ ಉಪನ್ಯಾಸಗಳನ್ನು ಆಲಿಸಲು ಮಾತ್ರವಲ್ಲದೆ ಸ್ವವಿಮರ್ಶೆ ಹಾಗು ಅನುಭವಗಳ ವಿನಿಮಯಕ್ಕೆ ಒತ್ತು ಕೊಡಲಾಗಿತ್ತು. ಅಭ್ಯಾಸಿಗಳ ಸ್ವವಿಮರ್ಶೆ ಮತ್ತು ತಿಳಿವಳಿಕೆಗೆ ಸಹಾಯವಾಗುವಂತೆ ಗುರುಗಳ ಅನೇಕ ಭಾಷಣಗಳನ್ನು ಕೇಳಿಸಲಾಯಿತು. ಅಭ್ಯಾಸಿಗಳ ಮುಖದಲ್ಲಿನ ಹೊಳೆಯುವ ಕಾಂತಿ ಕಾರ್ಯಕ್ರಮದ ಪರಿಣಾಮವನ್ನು ವ್ಯಕ್ತಪಡಿಸುತ್ತಿತ್ತು. ಅವರೆಲ್ಲರೂ ಪರಿಪೂರ್ಣ ಮಾನವರಾಗಲು, ನೈಜ ಅಭ್ಯಾಸಿಗಳಾಗಲು ಹಾಗು ಶ್ರೇಷ್ಠ ಪ್ರಶಿಕ್ಷಕರಾಗಲು ನಿರ್ಣಯ ಕೈಗೊಂಡರು.

## ಸೋನೆಪತ್, ಹರಿಯಾಣ

13 ಜನ ಪ್ರಶಿಕ್ಷಕರಿಗಾಗಿ ಹರಿಯಾಣದಲ್ಲಿರುವ ಸೋನೆಪತ್ ಆಶ್ರಮದಲ್ಲಿ ನವಂಬರ್ 10, 2013 ರಂದು ಒಂದು ಸಭೆಯನ್ನು ನಡೆಸಲಾಯಿತು. ಸೋ. ಕಮಲೇಶ್ ಪಟೇಲರು ಮತ್ತು ವಲಯ ವ್ಯವಸ್ಥಾಪಕರುಗಳ ನಡುವೆ ನಡೆದ ಸಭೆಯಲ್ಲಿ ಮೂಡಿಬಂದ ಅಂಶಗಳ ಬಗ್ಗೆ ವಲಯ ವ್ಯವಸ್ಥಾಪಕರು ಚರ್ಚೆ ನಡೆಸಿದರು. ಸಭೆಯು ಮಧ್ಯಾಹ್ನ 1.00 ಗಂಟೆಯವರೆಗೆ ಮುಂದುವರೆಯಿತು. ಭೋಜನದ ನಂತರ ಪ್ರಶಿಕ್ಷಕರು ಬೀಳ್ಕೊಂಡರು.

## ಲುಧಿಯಾನ, ಪಂಜಾಬ್

ನವೆಂಬರ್ 17ರಂದು, ಪಂಜಾಬ್, ಚಂಡೀಗಢ, ಅಂಬಾಲ ಮತ್ತು ಮಂಡಿ ದಬ್ವಾಲಿಗಳ ಪ್ರಶಿಕ್ಷಕರಿಗಾಗಿ ಲುಧಿಯಾನದಲ್ಲಿ ಒಂದು ಸಭೆ ನಡೆಸಲಾಯಿತು. ಸುಮಾರು 20 ಮಂದಿ ಪ್ರಶಿಕ್ಷಕರು ಭಾಗವಹಿಸಿದ್ದರು. ವಲಯಾಧಿಕಾರಿ (ನಿವೃತ್ತ ಮೇಜರ್ ಜನರಲ್) ಹರಭಜನ್‌ಸಿಂಗ್‌ರವರು ಅಧ್ಯಕ್ಷತೆ ವಹಿಸಿದ್ದರು. ಈ ವಲಯದ ಪ್ರಶಿಕ್ಷಕರು ಮತ್ತು ಅಭ್ಯಾಸಿಗಳನ್ನು ಕಾರ್ಯೋನ್ಮುಖರಾಗಿಸುವ ಮತ್ತು ಉತ್ತೇಜಿಸುವ ವಿಷಯಗಳ ಬಗ್ಗೆ ವಲಯಾಧಿಕಾರಿ ಗಮನ ಹರಿಸಿದರು. ಅನೇಕ ಸ್ವಯಂಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುವಿಕೆ, ತರಪೇತಿ ಕಾರ್ಯಕ್ರಮಗಳು, ಸಾಹಿತ್ಯವನ್ನು ಓದುವುದು, ಪ್ರತಿ ತಿಂಗಳ ಪ್ರಶಿಕ್ಷಕರ ಸಭೆಗಳು, ಮಿಷನ್ನಿನ ಚಟುವಟಿಕೆಗಳಲ್ಲಿ ಮಕ್ಕಳ ಭಾಗವಹಿಸುವಿಕೆ ಹಾಗು ನೆರೆಹೊರೆಯವರನ್ನು ಕುರಿತಂತೆ ಅನುಭವಗಳನ್ನು ಹಂಚಿಕೊಳ್ಳಲು ಅನೌಪಚಾರಿಕ ಸಭೆಗಳು, ಇವು ಚರ್ಚೆಗೊಂಡ ವಿಷಯಗಳಾಗಿದ್ದವು. ವಲಯಾಧಿಕಾರಿಗಳು ನೀಡಿದ ಸಂದೇಶವನ್ನು ಅಭ್ಯಾಸಿಗಳು ಉತ್ತಮವಾಗಿ ಸ್ವೀಕರಿಸಿದರು.





# ಕಾರ್ಯಕರ್ತರ ಪ್ರವಾಸಗಳು

## ವಲಯ ವ್ಯವಸ್ಥಾಪಕರ ದಕ್ಷಿಣ ತಮಿಳುನಾಡಿನ ಕೇಂದ್ರಗಳ ಭೇಟಿ

ಸೋ. ಎಸ್. ಪ್ರಕಾಶ್ ಮತ್ತು ವಲಯ ವ್ಯವಸ್ಥಾಪಕರಾದ ಸೋ. ಟಿ.ವಿ. ವಿಶ್ವನಾಥ ರಾವ್‌ರವರು ಅಕ್ಟೋಬರ್ 19 ರಂದು ಶ್ರೀವಿಲ್ಲಿಪುತ್ತೂರನ್ನು ತಲುಪಿದ ಉಪಕೇಂದ್ರಕ್ಕೆ ಭೇಟಿ ನೀಡಿ, ಪ್ರತಿಕ್ರಿಯಾತ್ಮಕ ಸಭೆ ಮತ್ತು ಸತ್ಸಂಗವನ್ನು ನಡೆಸಿದ ನಂತರ ಅವರು ಮಧುರೈಗೆ ಹಿಂತಿರುಗಿದರು.

24ರಂದು, ಮಧುರೈ ಆಶ್ರಮ ಹಾಗು ಹತ್ತಿರದ ಕೇಂದ್ರಗಳ 560 ಅಭ್ಯಾಸಿಗಳಿಗೆ ಅವರು ಸತ್ಸಂಗವನ್ನು ನಡೆಸಿಕೊಟ್ಟರು. ಬೆಳಿಗ್ಗೆ ಸಮೂಹ ಚರ್ಚೆ ಮತ್ತು ಆಶುಭಾಷಣ ಸಮಾವೇಶಗಳು ನಡೆದವು. ಮಧ್ಯಾಹ್ನ ಅವರು ಅಭ್ಯಾಸಿಗಳಿಗೆ







ಕೂಡಲೇ ಅಭ್ಯಾಸಿಗಳೊಂದಿಗೆ ಸಸಿಗಳನ್ನು ನೆಟ್ಟರು. ಇದರ ನಂತರ ಕೇಂದ್ರವನ್ನು ಅಭಿವೃದ್ಧಿಗೊಳಿಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚೆ ನಡೆಯಿತು.

ಪ್ರಶಿಕ್ಷಕರ ತಂಡದೊಡನೆ ಅವರು ಕಳಸಲಿಂಗಮ್ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ 75 ಮಂದಿ ಎಂ.ಬಿ.ಎ ವಿದ್ಯಾರ್ಥಿಗಳಿಗೆ ಒಂದು ಮುಕ್ತ ಸಭೆಯನ್ನು ನಡೆಸಿಕೊಟ್ಟರು. ವಿಶ್ವವಿದ್ಯಾನಿಲಯದ ಉಪಕುಲಪತಿ ಮತ್ತು ನೋಂದಣಿ ಅಧಿಕಾರಿಗಳು ಈ ಮುಕ್ತ ಸಭೆಗಳನ್ನು ಎಲ್ಲಾ ಕಾಲೇಜುಗಳಿಗೆ ವಿಸ್ತರಿಸುವ ಪ್ರಸ್ತಾಪ ಮಾಡಿದರು. ಅಲ್ಲದೆ ಆಕಾಂಕ್ಷಿ ವಿದ್ಯಾರ್ಥಿಗಳಿಗೆ ಒಂದು ವಾರ ಪರ್ಯಂತ ವಿಚಾರ ಸಂಕಿರಣಗಳನ್ನು ನಡೆಸುವ ಬಗ್ಗೆ ಸಹ ಪ್ರಸ್ತಾಪಿಸಿದರು.

ನಂತರ ತಂಡವು ರಾಜಪಾಳ್ಯಂಗೆ ಭೇಟಿ ನೀಡಿತು. ಸತ್ಸಂಗದ ತರುವಾಯ ಒಂದು ಅನೌಪಚಾರಿಕ ಸಭೆಯನ್ನು ನಡೆಸಲಾಯಿತು. ತದನಂತರ ತಂಡವು ಅಂದು ರಾತ್ರಿ ತಂಗಲು ವಿರುಧನಗರಕ್ಕೆ ತೆರಳಿತು. ಅಕ್ಟೋಬರ್ 20 ರಂದು ಬೆಳಗಿನ ಸತ್ಸಂಗದ ನಂತರ ವಿರುಧನಗರ ಮತ್ತು ಅರುಪ್ಪುಕೊಟ್ಟೈ ಕೇಂದ್ರದ ಅಭ್ಯಾಸಿಗಳೊಡನೆ ಆಶ್ರಮದ ವಾತಾವರಣವನ್ನು ಸಂರಕ್ಷಿಸುವ ವಿಷಯದಲ್ಲಿ ಗಮನ ಸೆಳೆಯಲು ಒಂದು ಸಭೆಯನ್ನು ನಡೆಸಲಾಯಿತು. ಬೆಳಗಿನ ಸುಮಾರು 11 ಗಂಟೆಗೆ ಸೋ. ರಾವ್ ಮತ್ತು ಸೋ. ಪ್ರಕಾಶ್ ರವರು ತಿರುಪ್ಪೂರಿಗೆ ಪ್ರಯಾಣ ಬೆಳೆಸಿದರು.

## ಜಂಟಿ ಕಾರ್ಯದರ್ಶಿಯವರ ತಮಿಳುನಾಡು (ದಕ್ಷಿಣ) ಪ್ರವಾಸ

ನವಂಬರ್ 22 ರಂದು ಸೋ. ಎ.ಪಿ. ದೊರೈ (ಜಂಟಿ ಕಾರ್ಯದರ್ಶಿ)ರವರು ಮನಮದುರೈ, ಶಿವಗಂಗೈ ಮತ್ತು ಮೇಲೂರ್ ಕೇಂದ್ರಗಳಿಗೆ ಭೇಟಿ ನೀಡಿ ಸತ್ಸಂಗಗಳನ್ನು ನಡೆಸಿಕೊಟ್ಟರು ಮತ್ತು ಪ್ರತಿಕ್ರಿಯಾತ್ಮಕ ಸಭೆಗಳಲ್ಲಿ ಭಾಗವಹಿಸಿ ಅಭ್ಯಾಸಿಗಳು ಸಾಧನೆಯ ಬಗ್ಗೆ ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡು ಚರ್ಚೆ ನಡೆಸುವಂತೆ ಪ್ರೋತ್ಸಾಹಿಸಿದರು.

ನವೆಂಬರ್ 23ರಂದು ಅವರು ಶ್ರೀವಿಲ್ಲಿಪುತ್ತೂರಿಗೆ ಭೇಟಿ ನೀಡಿ ಸತ್ಸಂಗದ ನಂತರ ಸಹಜ ಮಾರ್ಗದ ಸಾಧನೆಯಲ್ಲಿ ಧರ್ಮ, ಭಾಷೆ, ಮತ ಮತ್ತು ಸಂಸ್ಕೃತಿಗಳಿಂದ ದೂರ ಉಳಿಯುವುದರ ಬಗ್ಗೆ ಮಾತನಾಡಿದರು. ಅಭ್ಯಾಸಿಗಳಿಗೆ ಸಹಜಮಾರ್ಗ ಮತ್ತು ನಿರಂತರ ಸ್ಮರಣೆಯ ಬಗ್ಗೆ ಮಾತನಾಡಲು ಪ್ರೋತ್ಸಾಹಿಸಿದರು.

ಸುಮಾರು 4 ಗಂಟೆಗೆ ಅವರು ಪಶ್ಚಿಮ ಘಟ್ಟದ ಬೆಟ್ಟದ ತಪ್ಪಲಿನಲ್ಲಿರುವ ಸೇತುನಾರಾಯಣಪುರಂಗೆ ಭೇಟಿ ನೀಡಿ ಅಲ್ಲಿ ಪಾಲ್ಗೊಂಡಿದ್ದ 20 ಅಭ್ಯರ್ಥಿಗಳಿಗಾಗಿ ಒಂದು ಮುಕ್ತ ಸಭೆಯನ್ನು ನಡೆಸಿಕೊಟ್ಟರು. ಪೆರೈಯೂರಿನ ಸಹಜ ಮಾರ್ಗದ ಬೆಳವಣಿಗೆಯ ಬಗ್ಗೆ ಅವರ ಯೋಜನೆಗಳು ಮತ್ತು ತಮ್ಮ ಸ್ವಂತ ಕೇಂದ್ರದ ಅಭಿವೃದ್ಧಿಯ ಬಗ್ಗೆ ಮಾತನಾಡುವಂತೆ ತಿಳಿಸಿದರು. ಅವರು ಪೂರ್ಣದಿನದ ಕಾರ್ಯಕ್ರಮವನ್ನು ಸತ್ಸಂಗದೊಡನೆ ಮುಕ್ತಾಯಗೊಳಿಸಿದರು.

## ಸೋ. ರಾಜೇಶ್ ರಾಠೋಡ್‌ರವರ ಉತ್ತರ ಕರ್ನಾಟಕ ಭೇಟಿ

ಸೋ. ರಾಜೇಶ್ ರಾಠೋಡ್‌ರವರು (ಕರ್ನಾಟಕ ಉತ್ತರ) ವಲಯ 4ಎನಲ್ಲಿನ ರಾಯಚೂರು, ಶೋರಾಪುರ್, ಸೇಡಮ್, ಹುಮ್ನಾಬಾದ್, ಬೀದರ್ ಮತ್ತು ಗುಲ್ಬರ್ಗಳಿಗೆ ನವಂಬರ್ 15 ರಿಂದ 17ರವರೆಗೆ ಭೇಟಿ ನೀಡಿದರು. 6 ಮಂದಿಯ ತಂಡದೊಂದಿಗೆ ಸೋ. ರಾಜೇಶ್‌ರವರು ಈ ಕೇಂದ್ರಗಳಿಗೆ ಭೇಟಿ ನೀಡಿ ಸತ್ಸಂಗಗಳನ್ನು ನಡೆಸಿ ಅಭ್ಯಾಸಿಗಳನ್ನು ಕುರಿತು ಮಾತನಾಡಿದರು.

17 ರಂದು ಗುಲ್ಬರ್ಗ ಮತ್ತು ಹತ್ತಿರದ ಉಪಕೇಂದ್ರಗಳಿಂದ ಆಗಮಿಸಿದ್ದ 250 ಅಭ್ಯಾಸಿಗಳಿಗೆ ಗುಲ್ಬರ್ಗ ಆಶ್ರಮದಲ್ಲಿ ಒಂದು ಪೂರ್ಣದಿನದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. 3 ಸತ್ಸಂಗಗಳನ್ನು ನಡೆಸಲಾಯಿತು. ಸೋ. ರಾಜೇಶ್‌ರವರ ಭಾಷಣದ ನಂತರ ಅಭ್ಯಾಸಿಗಳೊಡನೆ ಪ್ರತಿಕ್ರಿಯಾತ್ಮಕ ಸಮಾವೇಶ ಹಾಗು ಪ್ರಶಿಕ್ಷಕರ ಸಭೆಗಳನ್ನು ನಡೆಸಲಾಯಿತು. ಎಲ್ಲ ಕೇಂದ್ರಗಳ ಅಭ್ಯಾಸಿಗಳು ಭಾಗವಹಿಸಿದ್ದಕ್ಕಾಗಿ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಗುರುಗಳ ಉಪಸ್ಥಿತಿಯಲ್ಲಿನ ಪ್ರೇಮಭರಿತ ವಾತಾವರಣವನ್ನು ಅನುಭವಿಸಿದಂತಹ ಭಾವನೆಯನ್ನು ಅನೇಕ ಅಭ್ಯಾಸಿಗಳು ವ್ಯಕ್ತಪಡಿಸಿದರು.



## ಎಮ್ಮಿಗನೂರು ಆಶ್ರಮ ಉದ್ಘಾಟನೆ, ಆಂ.ಪ್ರ



ದೀಪಾವಳಿಯ ದಿನ, ನವೆಂಬರ್ 3ರಂದು ಪೂಜ್ಯ ಗುರುಗಳು ಎಮ್ಮಿಗನೂರು ಆಶ್ರಮವನ್ನು ಉದ್ಘಾಟಿಸಿದರು. ಈ ಆಶ್ರಮವು ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯಲ್ಲಿದೆ. 2007ರಲ್ಲಿ ಸೋ. ಅಜಯ್ ಭಟ್ಟರ್‌ರವರು ಆಶ್ರಮದ ಶಂಕುಸ್ಥಾಪನೆಯನ್ನು ನೆರವೇರಿಸಿದ್ದರು. 2.5 ಎಕರೆಯ ವಿಸ್ತೀರ್ಣದ ಆಶ್ರಮವು ಏಳು ಅಡಿಗಳಷ್ಟು ಎತ್ತರದ ಗೋಡೆಯಿಂದ ಆವೃತವಾಗಿದೆ. ಧ್ಯಾನಮಂದಿರವು ಸುಮಾರು 400 ಅಭ್ಯಾಸಿಗಳಿಗಾಗಿ ಸ್ಥಳಾವಕಾಶ ಹೊಂದಿದೆ. ಪಾಕಶಾಲೆ ಮತ್ತು ಶೌಚಾಲಯಗಳೂ ಸಹ ನಿರ್ಮಿತಿಗೊಂಡಿವೆ. ಆಶ್ರಮವು ಆದೋನಿ ರಸ್ತೆಯಲ್ಲಿದ್ದು, ರಸ್ತೆ ಮತ್ತು ರೈಲ್ವೆನಿಲ್ದಾಣಗಳ ಮಾರ್ಗಗಳಿಗೆ ಅನುಕೂಲಕರವಾಗಿದೆ. ಆಶ್ರಮದ ಸುತ್ತಲೂ ಆರು ಎಕರೆಯಷ್ಟು ಅಭ್ಯಾಸಿ ವಸಾಹತು ಇದೆ. ಇದರ ನಿರ್ಮಾಣದಿಂದ ಸಂತುಷ್ಟರಾದ ಗುರುಗಳು ಸ್ಥಳೀಯ ಅಭ್ಯಾಸಿಗಳನ್ನು ಪ್ರಶಂಸಿಸಿದ್ದರು.

ಅಪರಾಹ್ನ, ಮೂವತ್ತೈದು ಉತ್ಕಾಂಕ್ಷಿಗಳಿಗಾಗಿ ಮುಕ್ತಸಭೆಯನ್ನು ನಡೆಸಿಕೊಡಲಾಯಿತು. ಭೋಜನಾನಂತರ, ಗುರುಗಳ ವಿಡಿಯೋ ಪ್ರದರ್ಶನ, ತದನಂತರ ನಡೆದ ಪ್ರಶ್ನೋತ್ತರ ಕಾಲದಲ್ಲಿ ಅಭ್ಯಾಸಿಗಳ ವಿಚಾರಣೆಗಳಿಗಾಗಿ ಸ್ಪಷ್ಟತೆಯನ್ನು ನೀಡಲಾಯಿತು. ಬಸವಕಲ್ಯಾಣದ ಅಭ್ಯಾಸಿಗಳು ಆಯೋಜಿಸಿದ ಕಾರ್ಯಕ್ರಮವು ಬಹಳ ಪರಿಣಾಮಕಾರಿಯಾಗಿದ್ದಿತು.

## ಚಿಣ್ಣರ ಕಾರ್ಯಕ್ರಮ, ತುಮ್‌ಕುಂಟ, ಆಂ.ಪ್ರ.

ವಲಯಾಶ್ರಮದಲ್ಲಿ ಅಕ್ಟೋಬರ್ 6 ರಿಂದ 27ರವರೆಗೆ ನಲವತ್ತೈದು ಮಕ್ಕಳಿಗಾಗಿ ಪೂರ್ಣ ದಿನದ ಕಾರ್ಯಕ್ರಮಗಳನ್ನು ಯುವ ಸ್ವಯಂಸೇವಕರ ತಂಡವು ನಡೆಸಿಕೊಟ್ಟಿತು. 6ರಂದು, ಆಶ್ರಮವೆಂದರೆ ಎಲ್ಲ ಮಕ್ಕಳು ಭ್ರಾತೃತ್ವದ ವಾತಾವರಣದಲ್ಲಿ ಜೊತೆಗೂಡಿ ಬೆಳೆಯುವ ಸ್ಥಳವೆಂದು ಕೇಂದ್ರನಿರ್ವಾಹಕರು ಹೇಳಿದರು. ಅವರು ಆಶ್ರಮದಲ್ಲಿ ಶಿಸ್ತನ್ನು ಕಾಯ್ದುಕೊಂಡು ಮೋಜು ಮಾಡಿರೆಂದು ಹೇಳಿದರು. ಮಕ್ಕಳು ಆಶ್ರಮದ ವಿವಿಧ ವಿಭಾಗಗಳಿಗೆ ಭೇಟಿ ನೀಡಿ ಸ್ವಯಂಸೇವಕರೊಡನೆ ಮಾತನಾಡಿದುದರಿಂದ, ಅವರಲ್ಲಿ ತಮ್ಮತನದ ಭಾವನೆಯನ್ನು ಹುಟ್ಟಿತು. ನಂತರ ಒಂದು ಕಿರುನಾಟಕ ಮತ್ತು ಖಜಾನೆ ಶೋಧನೆಯಂತಹ ಆಟವನ್ನು ನಡೆಸಿಕೊಡಲಾಯಿತು.

27ರಂದು, ಸಸ್ಯಗಳ ಕಿರು ಪರಿಚಯದ ನಂತರ ನಂತರ, ಮಕ್ಕಳು ಸಸಿಗಳನ್ನು ನೆಡುವುದನ್ನು ನೋಡುವುದೇ ಸಂತಸಕಾರಿಯಾಗಿದ್ದಿತು. ಒಮೇಗಾದಲ್ಲಿ ಗುರುಗಳು ನೀಡಿದ ಉಪನ್ಯಾಸವನ್ನು ಕೇಳಿದ ಮಕ್ಕಳು, ಬಲೂನ್ ನೃತ್ಯವನ್ನು ಬಹುವಾಗಿ ಮೆಚ್ಚಿಕೊಂಡರು, ನಂತರ ಭೋಜನಕ್ಕಾಗಿ ತೆರಳಿದರು. ಅವರು ಸಿಂಗರಿಸಿದ ದೀಪಗಳನ್ನು ನಂತರ ಅಭ್ಯಾಸಿಗಳಿಗೆ ದೀಪಾವಳಿಯಲ್ಲಿ ಉಡುಗೊರೆ ನೀಡಲಾಯಿತು.

## ಪ್ರಾದೇಶಿಕ ಕೂಟ, ಉತ್ತರ ಕರ್ನಾಟಕ



ಬಸವಕಲ್ಯಾಣ, ಬೀದರ್, ಹುಮ್ನಾಬಾದ್, ಭಾಲ್ಕಿ, ಥಾಣಾಕುಸ್ನೂರು ಮತ್ತು ಗುಲ್ಬರ್ಗಾದಿಂದ 140 ಅಭ್ಯಾಸಿಗಳು ಅಕ್ಟೋಬರ್ 27ರಂದು ಬಸವಕಲ್ಯಾಣದ ಶಿವಯೋಗಿ ವಿದ್ಯಾಲಯದಲ್ಲಿ ನಡೆದ ಪ್ರಾದೇಶಿಕ ಕೂಟದಲ್ಲಿ ಭಾಗವಹಿಸಿದ್ದರು. ಸ್ಥಳೀಯ ಅಭ್ಯಾಸಿಗಳನ್ನು ಉತ್ತೇಜಿಸಿ ಅವರಿಗೆ ಮಿಷನ್ನಿನ ಬಗ್ಗೆ ವಿಶಾಲ ದೃಷ್ಟಿಕೋನವನ್ನು ಒದಗಿಸುವುದೇ ಇದರ ಧ್ಯೇಯವಾಗಿತ್ತು. ಮುಂಜಾನೆಯ ಸತ್ಸಂಗದ ನಂತರ ಕೆಲ ಅಭ್ಯಾಸಿಗಳು ಮಾತನಾಡಿದರು. ನಂತರ, ಅಭ್ಯಾಸಿಗಳು ಮತ್ತು ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

## ಅರಿಯಿರಿ, ಅನುಭವಿಸಿ ಮತ್ತು ವ್ಯಕ್ತಪಡಿಸಿ, ಬೆಂಗಳೂರು



24ರಂದು ಬನಶಂಕರಿ ಆಶ್ರಮದಲ್ಲಿ ಆಯೋಜಿಸಿದ ಕಾರ್ಯಕ್ರಮದ ಉದ್ದೇಶವು ಅಭ್ಯಾಸಿಗಳಲ್ಲಿ ಅಧ್ಯಾತ್ಮಿಕ ವಿಷಯಗಳ ಬರಹಕೌಶಲ್ಯವನ್ನು ಹೊರತರುವುದೇ ಆಗಿದ್ದಿತು. ಅವರಿಗೆ ವಿಷಯಗಳ ಪಟ್ಟಿ ನೀಡಿ, ಅದರಿಂದ ವಿಷಯವೊಂದನ್ನು ಆರಿಸಿಕೊಂಡು, ಮಿಷನ್ನಿನ ಸಾಹಿತ್ಯದ ಸಹಾಯದಿಂದ ಲೇಖನವನ್ನು ಸಿದ್ಧಪಡಿಸಬೇಕಾದ್ದಿತು. ಸುಮಾರು ಹದಿನೈದು ಅಭ್ಯಾಸಿಗಳು ಸುಮಾರು ನೂರು ಅಭ್ಯಾಸಿಗಳೆದುರಿನಲ್ಲಿ ತಮ್ಮ ಲೇಖನಗಳನ್ನು ಪ್ರಸ್ತುತಪಡಿಸಿ ಅವರ ಪ್ರಶಂಸೆಯನ್ನು ಪಡೆದರು. ಇದರಿಂದ, ಮಿಷನ್ನಿನ ಸಾಹಿತ್ಯ ಓದುವುದಲ್ಲದೆ, ಗುರುಗಳ ಸ್ಮರಣೆಯಲಿ ಇರಲು ಸಹಾಯಕವಾಯಿತೆಂದು ಭಾಗಿಗಳು ಅಭಿಪ್ರಾಯ ವ್ಯಕ್ತಪಡಿಸಿದರು.

# ಯುವ ಕಾರ್ಯಕ್ರಮಗಳು

## ತಿರುಚ್ಚಿ, ತಮಿಳುನಾಡು



ನವೆಂಬರ್ 10 ಮತ್ತು 11ರಂದು, ಯುವ, ಉತ್ಸಾಹೀ ಅಭ್ಯಾಸಿಗಳಿಗಾಗಿ ಕಾರ್ಯಕ್ರಮವೊಂದನ್ನು ತಿರುಚ್ಚಿ ಆಶ್ರಮದಲ್ಲಿ ನಡೆಸಿಕೊಡಲಾಯಿತು. ಮುಂಜಾನೆಯ ಸತ್ಸಂಗದ ನಂತರ, ಸೋ. ರಾಜೇಶ್ ರಾಠೋಡ್‌ರವರು ‘ಆತ್ಮದ ಪಯಣ’ ಎಂಬ ವಿಷಯದ ಮೇಲೆ ಪ್ರಸ್ತುತಿ ನೀಡಿದರು. ಭಾಗಿಗಳಿಗೆ ಪರಿಶೀಲಕ ಮತ್ತು ವಿಚಾರ ಉದ್ದೀಪನಗೊಳಿಸುವ ಪ್ರಶ್ನಾವಳಿಯನ್ನು ನೀಡಲಾಯಿತು. ವಿಡಿಯೋ ತುಣುಕುಗಳ ಮೂಲಕ ಸ್ಪಷ್ಟನೆ, ‘ಹೃದಯವನ್ನು ಆಲಿಸಿ’ ವಿಷಯದ ಮೇಲೆ ಪಾರಸ್ಪರಿಕ ಸಂಭಾಷಣೆ, ಗುರು, ಸಂಸ್ಥೆ ಮತ್ತು ಪದ್ಧತಿಗಳ ಕುರಿತು ರಸಪ್ರಶ್ನೆ ಮತ್ತು ತಾರುಣ್ಯ– ಭರವಸೆ ಮತ್ತು ಪ್ರಯತ್ನಗಳ ಕಾಲ ಪುಸ್ತಕಾಧಾರಿತ ಪ್ರಸ್ತುತಿಗಳು ನಡೆದವು. ಸಂಜೆಯ ಸತ್ಸಂಗದೊಡನೆ ಕಾರ್ಯಕ್ರಮವು ಮುಕ್ತಾಯಗೊಂಡಿತು. ಭಾಗಿಗಳು ಕೃತಜ್ಞತೆ ಹಾಗು ಐಕ್ಯತಾಭಾವಗಳನ್ನು ಗಾಢವಾಗಿ ಅನುಭವಿಸಿದರು.

## ಶ್ರೀ ಗಂಗಾನಗರ್

ಶ್ರೀಗಂಗಾನಗರದಲ್ಲಿ ಒಂದು ದಿನಕ್ಕಾಗಿ ನಡೆದ ಯುವಕಾರ್ಯಕ್ರಮದಲ್ಲಿ, ಹದಿನೈದು ಅಭ್ಯಾಸಿಗಳು ಭಾಗವಹಿಸಿದ್ದರು. ಅವರು ವಿಚಾರಶಕ್ತಿ, ಅದು ಹೇಗೆ ನಮ್ಮ ಮೇಲೆ ಕೆಲಸಮಾಡುತ್ತದೆ, ನಮ್ಮ ಜೀವನದಲ್ಲಿ ಅದರ ಪ್ರಭಾವ ಹಾಗು ನಮ್ಮ ವಿಚಾರಗಳನ್ನು ಬದಲಾಯಿಸಿಕೊಳ್ಳುವುದರಿಂದ ನಮ್ಮ ಭವಿಷ್ಯವನ್ನು ಹೇಗೆ ರೂಪಿಸಿಕೊಳ್ಳಬಹುದು ಎಂದು ಹೇಳಿದ ‘ದಿ ಸೀಕ್ರೆಟ್’ ಎನ್ನುವ ಸಾಕ್ಷ್ಯಚಿತ್ರವನ್ನು ವೀಕ್ಷಿಸಿದರು. ಭವಿಷ್ಯದಲ್ಲಿ ಏನಾಗಬೇಕೆಂದು ನಾವು ಗಹನವಾಗಿ ಆಲೋಚಿಸಬೇಕು.

ರಸಪ್ರಶ್ನೆಗಾಗಿ, ವಿವಿಧ ವಿಷಯಗಳನ್ನು ಬರೆದ ಚೀಟಿಗಳನ್ನು ಅಭ್ಯಾಸಿಗಳಲ್ಲಿ ಹಂಚಲಾಯಿತು. ಪ್ರತಿ ಅಭ್ಯಾಸಿಯೂ ತಮ್ಮ ಅನುಭವ ಮತ್ತು ತಿಳಿವಳಿಕೆಯ ಆಧಾರದ ಮೇಲೆ ಅನೇಕ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸಿದರು. ದಿನಂಪ್ರತಿಯ ನಮ್ಮ ಸಾಧನೆಯಲ್ಲಿ ಸಹಾಯಕವಾಗುವ ಅನೇಕ ಸ್ಪಷ್ಟನೆಗಳು ಹಾಗು ಹೊಸ ವಿಷಯಗಳು ಉದಯವಾದವು.




## ಮಣಪಾಕ್ಕಂಗೆ ತಿರುಪ್ಪೂರು ಯುವಜನರ ಭೇಟಿ

ತಿರುಪ್ಪೂರಿನ ಸುಮಾರು 188 ಅಭ್ಯಾಸಿಗಳು ಸೆಪ್ಟೆಂಬರ್ 13ರಿಂದ 15ರವರೆಗೆ ಮಣಪಾಕ್ಕಂ ಆಶ್ರಮಕ್ಕೆ ಭೇಟಿ ನೀಡಿದ್ದರು. ಅವರು ಆಧ್ಯಾತ್ಮಿಕ ಪ್ರಗತಿ ಮತ್ತು ಸಾಧನೆಯನ್ನು ಕುರಿತ ಸಭೆಗಳಲ್ಲಿ ಭಾಗವಹಿಸಿ, ಮಣಪಾಕ್ಕಂನ ಹಿರಿಯ ಅಭ್ಯಾಸಿಗಳೊಡನೆ ಪ್ರಶ್ನೋತ್ತರ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಅವರು ಆಶ್ರಮದಲ್ಲಿ ಸೇವೆಯನ್ನು ಸಹ ಸಲ್ಲಿಸಿದರು. ಅವರು 14 ಮತ್ತು 15ರಂದು ಗುರುಗಳನ್ನು ಭೇಟಿ ಮಾಡಿ ಅವರೊಡನೆ ಕೊಂಚ ಕಾಲ ಕಳೆಯುವ ಭಾಗ್ಯ ಪಡೆದರು. ಎಲ್ಲ ಅಭ್ಯಾಸಿಗಳು ಬಹಳ ಉತ್ಸಾಹಭರಿತರಾಗಿದ್ದು, ಚೈತನ್ಯವನ್ನು ತುಂಬಿಕೊಂಡಂತೆ ಕಂಡರು.

## ಸಂಬಂಧಗಳನ್ನು ಕುರಿತ ಸಭೆ, ಕೊಲ್ಕಾತಾ

ನವೆಂಬರ್ 24ರಂದು ಕೊಲ್ಕಾತಾದ ಆಶ್ರಮದಲ್ಲಿ, ಸೋ. ಸ್ನೇಹಲ್ ದೇಶಪಾಂಡೆಯವರು ‘ಸಹಜಮಾರ್ಗದ ಪ್ರಭೆಯಡಿಯಲ್ಲಿ ಸಂಬಂಧಗಳು’ ವಿಷಯದ ಮೇಲೆ ಎರಡು ಗಂಟೆಯ ಸಭೆಯನ್ನು ನಡೆಸಿಕೊಟ್ಟರು. ಅವರು ಸಂಬಂಧಗಳು, ಅವುಗಳ ಮಹತ್ವ, ತ್ಯಾಗದಿಂದ ಸಂಬಂಧಗಳಲ್ಲಿ ತರಬಹುದಾದ ಸಾಮರಸ್ಯ ಮತ್ತು ‘ಮತ್ತೊಬ್ಬರೊಡನೆ ಸಂಪರ್ಕ ಸಾಧನೆ’ಯಂತಹ ಮನೋಭಾವ ಬೆಳೆಸಿಕೊಳ್ಳುವುದರ ಮಹತ್ವವನ್ನು ಕುರಿತು ಮಾತನಾಡಿದರು. ಭಾಗಿಗಳು ತಮ್ಮ ಜೀವನದ ಅತಿ ಸಂತಸದ ಕ್ಷಣಗಳು ಮತ್ತು ಇನ್ನೂ ಉತ್ತಮವಾಗಿ ಇರಬಹುದಾಗಿದ್ದ ಕ್ಷಣಗಳ ಪಟ್ಟಿ ಮಾಡಿದರು. ಪ್ರತಿ ಗುಂಪಿಗೆ ಒಂದು ಸಂಬಂಧವನ್ನು ಪ್ರತಿಪಾದಿಸುವ ವಿಡಿಯೊವನ್ನು ತೋರಿಸಿ, ಅದರ ಧನಾತ್ಮಕ ಮತ್ತು ಋಣಾತ್ಮಕ ಅಂಶಗಳನ್ನು ಹಾಗು ಪ್ರತೀ ಸಂಬಂಧದ ಪ್ರಾಮುಖ್ಯತೆಯನ್ನು ಚರ್ಚಿಸಲು ಹೇಳಲಾಯಿತು. ನಿರ್ವ್ಯಾಜ್ಯ ಪ್ರೇಮ, ಮೋಹರಾಹಿತ್ಯ, ಶ್ರದ್ಧೆ, ನಿಷ್ಠೆ, ನಂಬುಗೆ, ವಿನಮ್ರತೆ, ಸಂಪರ್ಕ, ತಾಳ್ಮೆ ಮತ್ತು ಸಹನೆಗಳಂತಹ ಮುಖ್ಯ ಗುಣಗಳು ವಿಡಿಯೋಗಳಲ್ಲಿ ಅಭಿವ್ಯಕ್ತವಾದವು. ಹಾರ್ಟ್ ಎನರ್ಜಿ ಆಂಪ್ಲಿಟ್ಯೂಡ್ ರೆಸೊನೆನ್ಸ್ ಟೆಸ್ಟ್ (HEART) ನೊಡನೆ ಸಭೆಯು ಮುಕ್ತಾಯಗೊಂಡಿತು. ಹಾರ್ಟ್ಸ್ ಕೋಡ್ ಎಂಬ ಪುಸ್ತಕವನ್ನು ಓದಲು ಶಿಫಾರಸ್ಸು ಮಾಡಿದರು. ಯಶಸ್ವೀ ಸಂಬಂಧಗಳಿಗಾಗಿ ಹಲವಾರು ಪ್ರಮುಖ ಅಂಶಗಳನ್ನು ತಿಳಿಯಲು ಭಾಗಿಗಳಿಗೆ ಸಹಾಯಕವಾಯಿತು.



## ತುಣುಕುಗಳು

### ಪೊಲ್ಲಾಚಿ, ತಮಿಳುನಾಡು

ಡಿಸೆಂಬರ್ 1ರಂದು ಸೋ. ಅರುಣಾಚಲಮ್ ಹಾಗು ಸೋ. ಸುಮತಿಯವರು, ಪೂರ್ಣ ದಿನದ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಕಾರ್ಯಕ್ರಮದಲ್ಲಿ ಮುಂಜಾನೆ 'ಆಶುಭಾಷಣ' ಮತ್ತು ಮಧ್ಯಾಹ್ನ ರಸಪ್ರಶ್ನೆಗಳನ್ನು ಅಳವಡಿಸಲಾಗಿತ್ತು. ಈ ಕಾರ್ಯಕ್ರಮವು ಅಭ್ಯಾಸಿಗಳ ಹೃದಯದಲ್ಲಿ ಹುರುಪಿನ ಹೊಸ ಅಲೆಗಳನ್ನು ತಂದು, ತಮ್ಮ ಸಾಧನೆಯನ್ನು ಪ್ರಾಮಾಣಿಕ ಹಾಗು ನಿಯಮಿತವಾಗಿಮಾಡಿ ಆಧ್ಯಾತ್ಮಿಕ ಬೆಳವಣಿಗೆಯನ್ನು ಪಡೆಯುವ ನಿರ್ಧಾರ ಮಾಡುವಂತೆ ಮಾಡಿತು.





### ದುರ್ಗ, ಛತ್ತೀಸಗಢ

ದುರ್ಗದಲ್ಲಿ ಡಿಸೆಂಬರ್ 20ರಂದು, GITPಯಲ್ಲಿಯ ಶುದ್ಧಿಕರಣದ ಸತ್ರದಲ್ಲಿ, 32 ಅಭ್ಯಾಸಿಗಳು ಪಾಲ್ಗೊಂಡರು.ಈ ಘಟಕವು, ತಮ್ಮ ಸಾಧನೆಯಲ್ಲಿ ಬರುವ ಅಡ್ಡಿ–ಆತಂಕಗಳನ್ನು ತಿಳಿದುಕೊಂಡು ಶುದ್ಧೀಕರಣದ ಬಗ್ಗೆ ನಮ್ಮ ಪದ್ಧತಿಯಲ್ಲಿ ಹೇಳಿಕೊಡಲಾದುದನ್ನು ಸರಿಯಾಗಿ ಅರ್ಥಮಾಡಿಕೊಂಡು ಸುಧಾರಿಸಿಕೊಳ್ಳಲು ಸಹಾಯವಾಯಿತೆಂದು ಮನಗಂಡರು.



### ಜಬಲಪುರ, ಮಧ್ಯಪ್ರದೇಶ

ರೇವಾದಲ್ಲಿಯ ಸೈನಿಕಶಾಲೆ ಹಾಗು ಜಯಜ್ಯೋತಿ ಶಾಲೆಗಳಲ್ಲಿ 6ರಿಂದ 12ನೇ ತರಗತಿಯ ವಿದ್ಯಾರ್ಥಿಗಳು, ಶಿಕ್ಷಕರು ಹಾಗು ಸಿಬ್ಬಂದಿ ವರ್ಗದವರಿಗಾಗಿ ಸ್ವ–ವಿಕಾಸ ಆಧ್ಯಾತ್ಮ ಮತ್ತು ಮೌಲ್ಯಾಧಾರಿತ ಶಿಕ್ಷಣಗಳ ಬಗ್ಗೆ VBSE ಕಾರ್ಯಕ್ರಮವನ್ನು ನಡೆಸಲಾಯಿತು. ಈ ಕಾರ್ಯಕ್ರಮವು ಕಾರ್ಯಸಾಧನೆ ಹಾಗು ಪ್ರೇರಣೆ, ದೃಷ್ಟಿಕೋನ, ಆಧ್ಯಾತ್ಮ ಮುಂತಾದ ವಿಷಯಗಳನ್ನೊಳಗೊಂಡಿತ್ತು ಹಾಗು ಇದು ವಿದ್ಯಾರ್ಥಿಗಳ ಮತ್ತು ಸಿಬ್ಬಂದಿಗಳಿಂದ ಮೆಚ್ಚುಗೆಯನ್ನು ಪಡೆಯಿತು.

### ಥಾಣೆ, ಮಹಾರಾಷ್ಟ್ರ

16ನೇ ನವೆಂಬರ್‌ದಂದು ಥಾಣೆಯ ಕೊಲ್ಬೆಟ್ ರಸ್ತೆಯ ನಗೆ ಕ್ಲಬ್‌ನಲ್ಲಿ, ನಾಲ್ಕು ಜನ ಪ್ರಶಿಕ್ಷಕರಿಂದ 27 ಸಹಭಾಗಿಗಳಿಗಾಗಿ, ಒಂದು ಬಹಿರಂಗ ಸಭೆ ನಡೆಸಲಾಯಿತು. ಸಂಯೋಜಕರು, ಧ್ಯಾನಸಾಧನೆಯು ನಮ್ಮನ್ನು ಭೂತ ಹಾಗು ಭವಿಷ್ಯಕಾಲಗಳ ಬಗ್ಗೆ ಚಿಂತಿಸದೆ, ವರ್ತಮಾನದಲ್ಲಿ ಒತ್ತಡವಿಲ್ಲದ ಜೀವನವನ್ನು ನಡೆಸಲು ಕಲಿಸುತ್ತದೆ ಎಂದು ವಿವರಿಸಿದರು. ಪ್ರಶಿಕ್ಷಕರು, ಅವರಿಗೆ ಅವಶ್ಯಕವೆನಿಸಿದಾಗ ಬೈಠಕುಗಳನ್ನು ಕೊಡಲು ತಾವು ಉಪಲಬ್ಧರಿರುವುದಾಗಿ ತಿಳಿಸಿದರು.





### ಕೊಡಗಿನ ಅಭ್ಯಾಸಿಗಳು; ಮಣಪಾಕ್ಕಮ್ ಆಶ್ರಮಕ್ಕೆ ಭೇಟಿ

ಕೊಡಗಿನ 45ಕ್ಕೂ ಹೆಚ್ಚಿನ ಅಭ್ಯಾಸಿಗಳು 19 ರಿಂದ 23ನೇ ನವೆಂಬರ್‌ವರೆಗೆ, ಮಣಪಾಕ್ಕಮ್ ಆಶ್ರಮಕ್ಕೆ ಭೇಟಿ ನೀಡಿದರು. ಕೊಡಗಿನ ಆಶ್ರಮವು ಬೆಳೆಯುತ್ತಿರುವುದನ್ನು ತಿಳಿದು ಗುರುಗಳು ಹರ್ಷಪಟ್ಟರು. ಅಭ್ಯಾಸಿಗಳು ಕೂರ್ಗಿ ಪೇಟಾ ಮತ್ತು ಬೆಳ್ಳಿಯಿಂದ ತಯಾರಿಸಿದ ಹಾಗು ಚಿನ್ನದ ಗೆರೆಗಳುಳ್ಳ ಪೀಛೆ ಕತ್ತಿಯನ್ನರ್ಪಿಸಿದರು. ನಂತರ ಗುರುಗಳು ಸತ್ಸಂಗ ಮಾಡಿಸಿದರು. ಈ ಕೇಂದ್ರವು ಇಪ್ಪತ್ತು ವರ್ಷಗಳ ಹಿಂದೆ ಪ್ರಾರಂಭವಾಗಿದ್ದರೂ, ಇತ್ತೀಚಿಗೆ ಚಾಲನೆಯನ್ನು ಪಡೆಯುತ್ತಿದೆ. ಈಗ ಮಡಿಕೇರಿ, ಕರಗುಂದಾ ಮತ್ತು ವಿರಾಜಪುರ ಎಂಬ ಈ ಮೂರು ಸ್ಥಳಗಳಲ್ಲಿ ಅಭ್ಯಾಸಿಗಳ ಮನೆಗಳಲ್ಲಿ ಸತ್ಸಂಗಗಳನ್ನು ನಡೆಸಲಾಗುತ್ತಿದೆ.

## ತಿರುಚ್ಚಿ, ತಮಿಳುನಾಡು.



ಅಭ್ಯಾಸಿಗಳಿಗೆ ಮಿಷನ್ನಿನ ಸಾಹಿತ್ಯವನ್ನೋದಲು ಉದ್ಯುಕ್ತಗೊಳಿಸಲೆಂದು ಸಪ್ಟೆಂಬರ್ 2013 ರಿಂದ "ಸಾಹಿತ್ಯದಿಂದ ಕಲಿಯುವಿಕೆ" ಎಂಬ ಉಪಕ್ರಮವನ್ನು ಪ್ರಾರಂಭಿಸಲಾಗಿದೆ.

ಪ್ರತಿ ತಿಂಗಳ ಮೂರನೆಯ ರವಿವಾರದಂದು, ಆ ತಿಂಗಳಿಗಾಗಿ ಆಯ್ದುಕೊಂಡ ಪುಸ್ತಕದಿಂದ ರಸಪ್ರಶ್ನೆಗಳು ಮತ್ತು ಗುರುಗಳ ಸಂದೇಶಗಳನ್ನು ಹಂಚಿಕೊಳ್ಳುವುದರ ಮೂಲಕ ಅಭಿರುಚಿ ಹಾಗು ನಾವೀನ್ಯತೆಯನ್ನು ಮೂಡಿಸಲು, ಪೂರ್ಣ ದಿನದ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. ಇಲ್ಲಿಯವರೆಗೆ ಸತ್ಯೋದಯ, ನನ್ನ ಗುರುದೇವ ಮತ್ತು ಮಾನವ ವಿಕಾಸದಲ್ಲಿ ಗುರುವಿನ ಪಾತ್ರ ಎಂಬ ಪುಸ್ತಕಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಾರ್ಯಕ್ರಮವು ಬಹಳಷ್ಟು ಅಭ್ಯಾಸಿಗಳಿಗೆ ಮಿಷನ್ನಿನ ಸಾಹಿತ್ಯವನ್ನೋದಲು ಪ್ರೇರೇಪಿಸಿದೆ. ಪುಸ್ತಕಗಳ ಮಾರಾಟದಲ್ಲಾದ ಹೆಚ್ಚಳವೇ ಇದಕ್ಕೆ ಸಾಕ್ಷಿಯಾಗಿದೆ. ಇದು ತಮ್ಮ ಮನಬಿಚ್ಚಿ ಅಧ್ಯಾತ್ಮಿಕ ಬೆಳವಣಿಗೆಯಲ್ಲಿಯ ವೈಯಕ್ತಿಕ ಅನುಭವಗಳನ್ನು ಹಂಚಿಕೊಳ್ಳುವಂತೆ ಮಾಡಿದೆ. ಅವರಲ್ಲಿ ಪುಸ್ತಕಗಳ ತಿಳಿವಳಿಕೆಯು ಬೇರೆ ಬೇರೆ ಆಯಾಮಗಳಲ್ಲಿ ವೃದ್ಧಿಸಿದೆ. ಸಾಂಘಿಕಸ್ಫೂರ್ತಿ, ಬಂಧುಭಾವ ಮತ್ತು ಅಧ್ಯಾತ್ಮದ ಕಡೆಗೆ ಹೆಚ್ಚಿನ ಒಲವು ಇವೇ ಈ ಕಾರ್ಯಕ್ರಮದ ಪರಿಣಾಮಗಳಾಗಿವೆ.

## ಚಿಕ್ಕಮಗಳೂರು, ದಕ್ಷಿಣ ಕರ್ನಾಟಕ





ಸೋ. ಮೋಹನದಾಸ ಹೆಗಡೆಯವರು ಚಿಕ್ಕಮಗಳೂರಿನಲ್ಲಿ ಅಕ್ಟೋಬರ್ 24 ರಿಂದ 26ರವರೆಗೆ ಎಐಟಿ ವಿದ್ಯಾಲಯ, ಬಿಎಸ್ಎನ್ಎಲ್ ಕಾರ್ಯಾಲಯ, ಯುರೇಕಾ ಅಕಾಡಮಿ, ಎಮ್ಇಎಸ್ ಮತ್ತು ಟಿಎಂಎಸ್ ವಿದ್ಯಾಲಯಗಳಲ್ಲಿ ಮುಕ್ತಸಭೆಗಳ ಸರಣಿಯನ್ನು ನಿರ್ವಹಿಸಿದರು. ಈ ಸತ್ರಗಳಲ್ಲಿಯ ಮುಖ್ಯ ವಿಷಯಗಳೆಂದರೆ, ಅಧ್ಯಾತ್ಮದ ಆವಶ್ಯಕತೆ, ಮತ್ತು ಒತ್ತಡರಹಿತ ಜೀವನಕ್ಕಾಗಿ ಧ್ಯಾನದ ಮಹತ್ವ.


26 ರಂದು ಗೃಹಕೂಟವೊಂದನ್ನು ನೆರವೇರಿಸಿ, ಅದರಲ್ಲಿ ಚಿಕ್ಕಮಗಳೂರು ಕೇಂದ್ರದ ಮುಂದಿನ ಬೆಳವಣಿಗೆಯ ಬಗ್ಗೆ ಚರ್ಚಿಸಲಾಯಿತು.

27 ರಂದು ಲಯನ್ಸ್ ಭವನದಲ್ಲಿ ಆಯೋಜಿಸಲಾದ ಅರ್ಧದಿನದ ಕಾರ್ಯಕ್ರಮದಲ್ಲಿ ಕಡೂರು ಮತ್ತು ಹರಿಹರಪುರ ಕೇಂದ್ರದ ಅಭ್ಯಾಸಿಗಳು ಸೇರಿದ್ದರು. ಸೋ. ಹೆಗಡೆಯವರು ಸಮತೋಲಜೀವನದ ಬಗ್ಗೆ ಗುರುಗಳ ಜೀವನದ ಉದಾಹರಣೆಗಳೊಂದಿಗೆ ವಿವರಿಸಿದರು. ತದನಂತರ ನಮ್ಮ ಸಾಧನೆಯಲ್ಲಿ ಎದುರಿಸಬೇಕಾದ ಅಡೆತಡೆಗಳನ್ನು ಹೇಗೆ ನಿವಾರಿಸಕೊಳ್ಳಬೇಕೆಂಬುದರ ಬಗ್ಗೆ ಚರ್ಚಿಸಲಾಯಿತು. ಸೋ. ರಮಾಕಾಂತರವರು, ತಾವು ಅಭ್ಯಾಸಿಯಾದ ನಂತರ ಆದ ಅನುಭವಗಳನ್ನು ಹಂಚಿಕೊಂಡರು. ಸಹಭಾಗಿಗಳೆಲ್ಲರು ಈ ಸತ್ರವನ್ನು ಮೆಚ್ಚಿಕೊಂಡು, ಇಂತಹ ಸತ್ರಗಳು ಇನ್ನೂ ಹೆಚ್ಚು ನಡೆಸಬೇಕೆಂದು ಆಶಿಸಿದರು.

## ಹೊಸ ಪ್ರಕಟನೆಗಳು




### ಡಿವಿಡಿಗಳು

ಹಾರ್ಟ್‌ಸ್ಪೀಕ್ 2011– ಭಾಗ 2 (ಇಂಗ್ಲೀಷ್)


ದ ನೀಡ್ ಆಫ್ ಟೈಮ್ (ಇಂಗ್ಲಿಷ್)

ಪೇರೆಂಟ್‌ಹುಡ್ (ಇಂಗ್ಲಿಷ್)


### ಪುಸ್ತಕಗಳು




ಪ್ರಿನ್ಸಿಪಲ್ಸ್ ಆಫ್ ಸಹಜ್‌ಮಾರ್ಗ್
ಭಾಗ 13
ತಮಿಳು




ಲವ್ ಆಂಡ್ ಡೆತ್
ತೆಲುಗು




ಫ್ರುಟ್ ಆಫ್ ದಿ ಟ್ರೀ
ಹಿಂದಿ




ಅಭ್ಯಾಸಿ ದಿನಚರಿ
ಹಿಂದಿ



ದ ಸ್ಪೈಡರ್ಸ್ ವೆಬ್
ಭಾಗ 1
ಮಲಯಾಳಂ

## ಯೋಗಾಶ್ರಮ, ಸಿಲಿಗುರಿ, ಪಶ್ಚಿಮ ಬಂಗಾಳ

## ಪ್ರಭಾ ಕೇಂದ್ರ





"ನೆನಪಿಡಿ; ನಿಸರ್ಗದ ಎಲ್ಲಾ ಸಂಪನ್ಮೂಲಗಳು, ಅದು ಆರೋಗ್ಯವೇ ಆಗಿರಲಿ, ಸಂಪತ್ತೇ ಆಗಿರಲಿ, ಕೀರ್ತಿ, ಐಶ್ವರ್ಯ ಎಲ್ಲವನ್ನೂ ತಿರುಗಿ ಪಡೆಯಬಹುದು, ಆದರೆ ಸಮಯ; ಸಮಯವನ್ನು ತಿರುಗಿ ಪಡೆಯಲಾಗದು."

ಪಾರ್ಥಸಾರಥಿ ರಾಜಗೋಪಾಲಾಚಾರಿ, 11 ನೇ ಜುಲೈ 2010, ಸಿಲಿಗುರಿ





ಸಿಲಿಗುರಿಯೊಂದು ಪುಟ್ಟ ಪಟ್ಟಣವಾಗಿದ್ದು, ಪಶ್ಚಿಮಬಂಗಾಳದ ಪಶ್ಚಿಮ ಭಾಗದಲಿ ್ಲಯ ಹಿಮಾಲಯ ತಪ್ಪಲಿನಲ್ಲಿ ಸ್ಥಿತವಾಗಿದೆ. ಇದರ ಸ್ಥಳದ ಕಾರಣ, ಇದೊಂದು ಈಶಾನ್ಯಭಾಗದ ಮುಖ್ಯದ್ವಾರವಾಗಿದ್ದು, ನೇಪಾಳ, ಬಾಂಗ್ಲಾದೇಶ, ಮತ್ತು ಭೂತಾನ ದೇಶಗಳ ಸೀಮೆಗಳನ್ನು ಹಂಚಿಕೊಂಡಿದೆ.

4.83 ಎಕರೆ ಜಮೀನಿನಲ್ಲಿಯ ಆಶ್ರಮವು ಚೋಬಾಭಿಟಾ ಎಂಬ ಗ್ರಾಮದಲ್ಲಿದ್ದು, ಮುಖ್ಯ ಪಟ್ಟಣದಿಂದ 12 ಕಿ.ಮೀ., ರೈಲ್ವೆ ನಿಲ್ದಾಣದಿಂದ 8 ಕಿ.ಮೀ., ಮತ್ತು ವಿಮಾನ ನಿಲ್ದಾಣದಿಂದ 25 ಕಿ.ಮೀ. ದೂರದಲ್ಲಿದೆ. ಈ ಆಶ್ರಮವು ಪ್ರಾಕೃತಿಕ ಸೌಂದರ್ಯದ ಸ್ಥಳವಾಗಿದ್ದು, ಇಲ್ಲಿಂದ ಹಿಮಾಚ್ಛಾದಿತ ಕಾಂಚನಗಂಗಾ ಪರ್ವತ ಶಿಖರಗಳನ್ನು ನೋಡಬಹುದಾಗಿದೆ.

ಗುರುಗಳು ಈ ಆಶ್ರಮದ ಸ್ಥಳವನ್ನು 2ನೇ ನವೆಂಬರ್ 2009ರಂದು ಗ್ಯಾಂಗ್ಟಾಕ್‌ಗೆ ಹೋಗುವಾಗ, ನೋಂದಾಯಿಸಿದರು. ಹಾಗು ಅಲ್ಲಿಂದ ಮರಳಿ ಬರುವಾಗ ಆಶ್ರಮದ ಕಟ್ಟಡಕ್ಕೆ ಅನುಮತಿಯನ್ನಿತ್ತರು. ಈ ಆಶ್ರಮವು ಸುಮಾರು ಎಂಟು ತಿಂಗಳ ಅವಧಿಯಲ್ಲಿ ಕಟ್ಟಲಾಯಿತು. ಇದು ಗುರುಗಳ ಕುಟೀರ, 3000 ಚ.ಅಡಿ ವಿಸ್ತೀರ್ಣದ ಧ್ಯಾನಮಂದಿರ, 300 ಅಭ್ಯಾಸಿಗಳಿಗೆ ಸಾಕಾಗುವಷ್ಟು ನಿವಾಸಸ್ಥಾನ, ಶೌಚಾಲಯಗಳು, 250 ಜನರಿಗೆ ಒಟ್ಟಿಗೆ ಊಟ ಬಡಿಸಬಹುದಾದಷ್ಟು ಅಡುಗೆಮನೆ ಹಾಗು ಭೋಜನತಾಣಗಳನ್ನೊಳಗೊಂಡಿದೆ. ರಸ್ತೆಗಳನ್ನು ಮಾಡಲಾಗಿದೆ ಹಾಗು ಸಾಕಷ್ಟು ಗಿಡಗಳನ್ನು ನೆಡಲಾಗಿದೆ.

ಗುರುಗಳು ಈ ಆಶ್ರಮದ ಉದ್ಘಾಟನೆಯನ್ನು 11 ನೇ ಜುಲೈ 2010ರಂದು ಈಶಾನ್ಯಭಾಗದ ಎಲ್ಲಾ ಮತ್ತು ನೇಪಾಳದಿಂದ ಬಂದ ಸುಮಾರು 600 ಅಭ್ಯಾಸಿಗಳ ಉಪಸ್ಥಿತಿಯಲ್ಲಿ ನೆರವೇರಿಸಿದರು. ಸತ್ಸಂಗದ ನಂತರ ಗುರುಗಳು ಭಾಷಣವನ್ನಿತ್ತರು. ಅವರು, ಈ ಆಶ್ರಮದ ಉಪಯೋಗ ಈ ಭಾಗದ ಮಿಷನ್ನಿನ ಬೆಳವಣಿಗೆಗಾಗಿ ಮಾಡಬೇಕಾದ ಆವಶ್ಯಕತೆಗೆ ಪ್ರಾಧಾನ್ಯತೆಯನ್ನಿತ್ತರು. ಪ್ರತಿ ವರ್ಷ ಎರಡು ಅಥವಾ ಮೂರು ಪ್ರಾದೇಶಿಕ ಒಕ್ಕೂಟಗಳನ್ನು, ವಿಶೇಷವಾಗಿ ಪರ್ವತ ಪ್ರದೇಶಗಳಲ್ಲಿರುವ ಅಭ್ಯಾಸಿಗಳಿಗಾಗಿ ಆಚರಿಸಲು ಸಲಹೆ ನೀಡಿದರು. ಈ ಒಕ್ಕೂಟಗಳ ವೇಳೆಯಲ್ಲಿ ನಿವಾಸ ಹಾಗು ಊಟಗಳ ಖರ್ಚುವೆಚ್ಚಗಳನ್ನು ಎಸ್‌ಎಂಎಸ್‌ಎಫ್ ವತಿಯಿಂದ ನಿರ್ವಹಿಸಲಾಗುವುದು. ಆಶ್ರಮದ ಉದ್ಘಾಟನೆಯಾದಾಗಿನಿಂದ, ಪ್ರತಿ ವರ್ಷ ಸಿಲಿಗುರಿ ಹಾಗು ಸುತ್ತಮುತ್ತಲಿನ ಅಭ್ಯಾಸಿಗಳಿಗಾಗಿ ಎಲ್ಲಾ ಗುರುಗಳ ಜನ್ಮೋತ್ಸವಗಳನ್ನು ಆಚರಿಸಲಾಗುತ್ತಿದೆ.





To download or subscribe to this newsletter, please visit http://www.sahajmarg.org/newsletter/india For feedback, suggestions and news articles please send email to in.newsletter@srcm.org

© 2013 Shri Ram Chandra Mission ("SRCM"). All rights reserved. "Shri Ram Chandra Mission", "Sahaj Marg", "SRCM", "Constant Remembrance" and the Mission's Emblem are registered Trademarks of Shri Ram Chandra Mission.This Newsletter is intended exclusively for the members of SRCM. The views expressed in the various articles are provided by various volunteers and are not necessarily those of SRCM.